ಬೆಲೆ ರೂ.2.50 WPP No. SK/WPP/UDP/81/2012-2014
D.O.P - 15-12-2013 at Udupi Sorting Office

# ಶ್ರೀ ಶಾರದಾ

ಮಾಸಪತ್ರಿಕೆ – 15 ಡಿಸೆಂಬರ್ 2014

॥ ಧಿಯೋ ಯೋನಃ ಪ್ರಚೋದಯಾತ್ ॥

**Smt. Nagaveni Ullas**
Proprietor
Mobile : 9741626190
E-mail : rao.ullas@yahoo.co.in

KEYA

**RAMDEV ENTERPRISES**
"Ramdev", Opp. Balaganapathi Temple, Padubidri-574111, Udupi Dist.

Authorised Distributor For :
1. KEYA-Amalgam Speciality Foods (I) Pvt. Ltd.
2. Swastiks-Vishnu Masala Food Pvt. Ltd.
3. Agarbathi, Loban & Camphor-Stockists

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754

ಸಂಪುಟ-14 ಸಂಚಿಕೆ-12 ಪುಟಗಳು-8 Registered Under No.KA/SK/UDP/1260/2012-2014 Dated from 01-01-2012 to 31-12-2014.

# ಉಡುಪಿ–ಮಂಗಳೂರಿನ ಸಮಾಜ ಬಾಂಧವರಿಂದ ಮುಂಬೈ ಪ್ರವಾಸ





**ಮುಂಬೈಯ ಶ್ರೀ ಸುಬ್ರಹ್ಮಣ್ಯ ಸೇವಾ ಸಂಘದ 75ನೇ ವರ್ಷದ ಶುಭ ಸಂದರ್ಭದಲ್ಲಿ ನಡೆದ ಪ್ಲಾಟಿನಮ್ ಜುಬ್ಲಿ ಕಾರ್ಯಕ್ರಮದಲ್ಲಿ ಭಾಗವಹಿಸುವ ಸಲುವಾಗಿ ಉಡುಪಿ ಹಾಗೂ ದ.ಕ. ಜಿಲ್ಲೆಯ ಒಟ್ಟು 56 ಸಮಾಜ ಬಾಂಧವರು ಜೊತೆಯಾಗಿ ಮುಂಬೈ ಪ್ರವಾಸ ಕೈಗೊಂಡರು.**

ನವೆಂಬರ್ 15ರಂದು ಸಂಜೆ 2.30ಕ್ಕೆ ಮಂಗಳೂರಿನಿಂದ ಹೊರಡುವ ಮತ್ಸ್ಯಗಂಧಾ ರೈಲಿನಲ್ಲಿ ಪ್ರಯಾಣ ಪ್ರಾರಂಭ'. ಮಂಗಳೂರಿನಿಂದ ಹೊರಡುವವರು ಮಂಗಳೂರು ರೈಲು ನಿಲ್ದಾಣದಿಂದಲೂ ಪಡುಬಿದ್ರೆ ಉಡುಪಿಯಿಂದ ಹೊರಡುವವರು ಉಡುಪಿ ರೈಲು ನಿಲ್ದಾಣದಿಂದಲೂ ಪ್ರಯಾಣ ಪ್ರಾರಂಭಿಸಿದರು. ಕಳೆದ ಅಕ್ಟೋಬರ್ ತಿಂಗಳಲ್ಲಿಯೇ ಮುಂಬೈಗೆ ಹೋಗುವ ಹಾಗೂ ಹಿಂದಕ್ಕೆ ಬರುವ ರೈಲ್ವೆ ಟಿಕೇಟುಗಳನ್ನು ಮುಂಗಡ ಬುಕಿಂಗ್ ಮಾಡಲಾಗಿತ್ತು.

**ಪ್ರಯಾಣಿಕರು :**

ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದಲ್ಲಿ ಕಳೆದ ಹಲವು ವರ್ಷಗಳಿಂದ ಯಕ್ಷಗಾನ ನೃತ್ಯಾಭ್ಯಾಸ ಮಾಡುತ್ತಾ ಕಲಾ ಸೇವೆ ಗೈಯುತ್ತಿರುವ ಶ್ರೀ ಶಾರದಾ ಹವ್ಯಾಸಿ ಯಕ್ಷಗಾನ ಕಲಾವಿದರ ಬಡಗುತಿಟ್ಟು ಯಕ್ಷಗಾನ ತಂಡ, ಮಂಗಳೂರು ಸುತ್ತಮುತ್ತ ಕಲಾ ಪ್ರದರ್ಶನ ನೀಡುತ್ತಿರುವ ಶ್ರೀ ದೇವಾನಂದ ಭಟ್ ನೇತೃತ್ವದ ತೆಂಕುತಿಟ್ಟು ಯಕ್ಷಗಾನ ಕಲಾವಿದರ ತಂಡ ಅಲ್ಲದೆ ನಮ್ಮ ಸಮಾಜದ ಬೇರೆ ಬೇರೆ ಸಂಘಟನೆಗಳ ಅಧಿಕಾರಿಗಳು, ಪದಾಧಿಕಾರಿಗಳು ಮತ್ತು ಸದಸ್ಯರು ಜೊತೆಯಲ್ಲಿದ್ದು, ಈ ಪ್ರವಾಸ ಅತ್ಯಂತ ವ್ಯವಸ್ಥಿತವಾಗಿ ನೆರವೇರಿತು. ರೈಲು ಸಾಗುತ್ತಿದ್ದಂತೆಯೇ ಬಾರ್ಕೂರು ಕುಂದಾಪುರದಲ್ಲಿ ಹಲವು ಸಮಾಜ ಬಾಂಧವರು ರೈಲು ಹತ್ತುತ್ತಿದ್ದಂತೆ, ಇತ್ತ ನಮ್ಮ ಲಗೇಜುಗಳನ್ನು ವ್ಯವಸ್ಥಿತ ಸ್ಥಳಗಳಲ್ಲಿ ಜೋಡಿಸಿ ಇಡಲಾಯಿತು. ಎರಡು ತಂಡಗಳ ಯಕ್ಷಗಾನ ವೇಷಭೂಷಣಗಳ ದೊಡ್ಡ ದೊಡ್ಡ ಲಗೇಜುಗಳೂ ಇದ್ದುದರಿಂದ ಅವೆಲ್ಲವನ್ನೂ ವ್ಯವಸ್ಥೆಗೊಳಿಸಲು ಬಹಳಷ್ಟು ಸಮಯವೇ ಹಿಡಿಯಿತು. (3ನೇ ಪುಟಕ್ಕೆ...)

# ಜಗದ್ಗುರುಗಳ ಉಡುಪಿ ಜಿಲ್ಲಾ ಪ್ರವಾಸ



ದಕ್ಷಿಣಾಮ್ನಾಯ ಶ್ರೀ ಕ್ಷೇತ್ರ ಶೃಂಗೇರಿ ಪೀಠಾಧೀಶ್ವರ ಜಗದ್ಗುರು ಶ್ರೀ ಶ್ರೀ ಭಾರತೀ ತೀರ್ಥ ಮಹಾ ಸನ್ನಿಧಾನಂಗಳವರು ಕಳೆದ ನವೆಂಬರ್ 25ರಿಂದ ಉಡುಪಿ ಜಿಲ್ಲಾ ಕುಂದಾಪುರ ತಾಲೂಕಿಗೆ ಧಾರ್ಮಿಕ ಪ್ರವಾಸವನ್ನು ಕೈಗೊಂಡರು. ನವೆಂಬರ್ 25ರ ಸಂಜೆ ಕುಂದಾಪುರಕ್ಕೆ ಆಗಮಿಸಿದ ಶ್ರೀ ಶ್ರೀಗಳನ್ನು ಕುಂದೇಶ್ವರ ಪ್ರವೇಶ ಗೋಪುರದ ಬಳಿ ಪೂರ್ಣಕುಂಭ ಸ್ವಾಗತದೊಂದಿಗೆ ಭವ್ಯ ಮರವಣಿಗೆಯಲ್ಲಿ ಶ್ರೀ ದೇವಳಕ್ಕೆ ಕರೆತಂದು, ಶ್ರೀ ಶ್ರೀಗಳ ಪೀಠಾರೋಹಣದ 40ನೇ ವರ್ಷಾಚರಣೆಯ ನಿಮಿತ್ತ ಗುರುವಂದನೆಯೊಂದಿಗೆ ಪೌರ ಸನ್ಮಾನ ನೀಡಿ ಗೌರವಿಸಲಾಯಿತು. ಬಳಿಕ ಶ್ರೀ ಶ್ರೀಗಳು ನರೆದಿದ್ದ ಭಕ್ತ ಬಾಂಧವರನ್ನುದ್ದೇಶಿಸಿ ಆಶೀರ್ವಚನ ನೀಡಿದರು.

ಶುಕ್ರವಾರ ಕುಂದಾಪುರದ ಶ್ರೀ ಸೀತಾರಾಮಚಂದ್ರ ದೇವಸ್ಥಾನದಲ್ಲಿ ನಡೆದ ಸ್ಥಾಪನಾ ಬೆಳ್ಳಿ ಹಬ್ಬದ ಸಂಭ್ರಮದ ಅಂಗವಾಗಿ ನಡೆದ ಶ್ರೀ ಸೀತಾರಾಮಚಂದ್ರ ದೇವರ ಪುನಃಪ್ರತಿಷ್ಠಾಪನಾ ಕಾರ್ಯಕ್ರಮದಲ್ಲಿ ಶ್ರೀ ದೇವರಿಗೆ ಕುಂಭಾಭಿಷೇಕ ನೆರವೇರಿಸಿದರು. ಬಳಿಕ ನಡೆದ ಧಾರ್ಮಿಕ ಸಮಾರಂಭದಲ್ಲಿ ಅನುಗ್ರಹ ಭಾಷಣ ಮಾಡಿದ ಶ್ರೀ ಶ್ರೀಗಳನ್ನು ದೇವಸ್ಥಾನದ ವತಿಯಿಂದ ಭಿನ್ನವತ್ತಳೆ ನೀಡಿ ಗೌರವಿಸಲಾಯಿತು.

# ಶ್ರೀ ಸುಬ್ರಹ್ಮಣ್ಯ ಸೇವಾ ಸಂಘ, ಮುಂಬೈ ಅಮೃತ ಮಹೋತ್ಸವ ಸಂಭ್ರಮ

ಶ್ರೀ ಸುಬ್ರಹ್ಮಣ್ಯ ಸೇವಾ ಸಂಘ, ಮುಂಬೈ ಇದರ 75ನೇ ವರ್ಷದ ಸಂಭ್ರಮದಲ್ಲಿ ಆಚರಿಸುವ ಪ್ಲಾಟಿನಂ ಜ್ಯುಬಿಲಿ ಕಾರ್ಯಕ್ರಮವು ದಿನಾಂಕ 15-11-2014ರಂದು ಮುಂಬೈ ಮಾಟುಂಗದ ವಿಶ್ವೇಶ್ವರಯ್ಯ ಸಭಾಂಗಣದಲ್ಲಿ ಸಂಜೆ ನೆರವೇರಿತು. ಪ್ರಾರಂಭದಲ್ಲಿ ಕೆಲವು ಸಾಂಸ್ಕೃತಿಕ ಕಾರ್ಯಕ್ರಮಗಳ ನಂತರ 5 ಗಂಟೆಗೆ ನಡೆದ ಮುಖ್ಯ ಸಮಾರಂಭವನ್ನು ಭಾರತದ ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶ ಶ್ರೀ ಬಿ.ಎನ್.ಶ್ರೀಕೃಷ್ಣರವರು ಉದ್ಘಾಟಿಸಿದರು. ಸಂಘದ ಅಧ್ಯಕ್ಷ ಶ್ರೀ ಸುಬ್ಬಣ್ಣ ರಾವ್ ಕರಂಬಳ್ಳಿಯವರು ಸಂಘವು 75 ವರ್ಷಗಳಲ್ಲಿ ನಡೆಸಿದ ಚಟುವಟಿಕೆಗಳ ಸಂಕ್ಷಿಪ್ತ ಮಾಹಿತಿಯನ್ನು ಸಭೆಗೆ ತಿಳಿಸಿದರು.

ನಂತರ ಮುಂಬೈಯಲ್ಲಿ 75 ವರ್ಷ ಪೂರೈಸಿದ ತುಳು ಹಾಗೂ ಕನ್ನಡದ ಸಂಘಟನೆಗಳನ್ನು ಗುರುತಿಸಿ ಗೌರವಿಸುವ ಕಾರ್ಯಕ್ರಮವು ನೆರವೇರಿತು. ಉದ್ಘಾಟಕರಾದ ಜ॥ ಶ್ರೀಕೃಷ್ಣರವರ ಅನುಭವಪೂರ್ಣ ಮಾತಿನ ನಂತರ ಮುಕ್ತಾಯಗೊಂಡ ಸಭೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮವಾಗಿ ಮುಂಬೈ ಬಾಂಡುಪ್‌ನ ನೃತ್ಯ ವಿದ್ಯಾನಿಲಯದ ಕಲಾವಿದರಿಂದ 'ಭಕ್ತ ಪ್ರಹ್ಲಾದ' ನೃತ್ಯ ರೂಪಕವು ನೆರವೇರಿತು. ಮುಂಬೈ ಸಂಘದ ಪದಾಧಿಕಾರಿಗಳೆಲ್ಲರೂ ಸಮಾರಂಭದಲ್ಲಿ ಉಪಸ್ಥಿತರಿದ್ದರು.

★★★




## ದಿನಾಂಕ 16ರಂದು ಸಯಾನ್‌ನಲ್ಲಿ

ದಿನಾಂಕ 16ರಂದು ಬೆಳಿಗ್ಗೆ ಸಯಾನ್‌ನ ಗೀತಾಗೋವಿಂದ ಹಾಲ್ (ಗೋಕುಲ್) ನಲ್ಲಿ ನಡೆದ ಕಾರ್ಯಕ್ರಮವು ಪ್ರಾರ್ಥನೆಯ ನಂತರ ಸಂಘದ ಪದಾಧಿಕಾರಿಗಳು ಹಾಗೂ ಊರಿನಿಂದ ಆಗಮಿಸಿದ್ದ ಗಣ್ಯರು ಜೊತೆಯಾಗಿ ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟನೆಗೊಂಡಿತು.

ನಂತರ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಎಮ್.ಡಿ. ಆಗಿರುವ ಶ್ರೀ ಪ್ರದೀಪ್ ಕುಮಾರ್ ಪಂಜ, ಬ್ರಹ್ಮಶ್ರೀ ವಾಗೀಶ ಶಾಸ್ತ್ರಿ ಪಾವಂಜೆ, ಶ್ರೀ ಯಾಜಿ ಎಚ್.ನಿರಂಜನ ಭಟ್ ಪಾವಂಜೆ, (5ನೇ ಪುಟಕ್ಕೆ...)

**ಸಂಪಾದಕ ಮಂಡಳಿ**

ಕೃಷ್ಣಕುಮಾರ್ ರಾವ್, ಮಟ್ಟು
ಕೆ. ವೇಣುಗೋಪಾಲ್ ರಾವ್
ಡಾ। ವೈ. ಸುದರ್ಶನ ರಾವ್
ಟಿ. ಸುರೇಶ್ ರಾವ್, ನಿಟ್ಟೂರು
ಟಿ. ವಿಶ್ವನಾಥ ಶಾನುಭಾಗ್, ವಿ.ಪಿ.ನಗರ
ಪ್ರಕಾಶ್ ರಾವ್ ಕೋಲ್ಪೆ, ಮಣಿಪಾಲ

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನ ಹಾಗೂ ವೈಯಕ್ತಿಕ ಜಾಹೀರಾತುಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಹಾಗೂ ಜಾಹೀರಾತುದಾರರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯ ವಾಗಿರಬೇಕಾಗಿಲ್ಲ. ಲೇಖನಗಳನ್ನು, ಸುದ್ದಿಗಳನ್ನು ಮತ್ತು ಜಾಹೀರಾತುಗಳನ್ನು ಪತ್ರಿಕೆಯ ಮೂಲ ಚಿಂತನೆಗೆ ಅನುಗುಣವಾಗಿ ಸೂಕ್ತ ಮಾರ್ಪಾಡು ಮಾಡಿಕೊಳ್ಳುವ ಅಧಿಕಾರ ಸಂಪಾದಕ ಮಂಡಳಿಗಿದೆ. -ಸಂಪಾದಕ ಮಂಡಳಿ

## ಚಿಂತನ

ಶಾಲೆ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಮೇಲೆ ದೌರ್ಜನ್ಯ ಹೆಚ್ಚುತ್ತಿದೆ ಎಂಬುದು ಇತ್ತೀಚಿನ ಕೆಲವು ಘಟನೆಗಳಿಂದ ತಿಳಿದುಬರುತ್ತದೆ. ಅದಕ್ಕಾಗಿ ಸರಕಾರದಿಂದ ರೂಪಿತವಾದ ನಿಯಮ ದಂತೆ ಶಾಲೆಗಳಲ್ಲಿ 'ಮಕ್ಕಳ ಸುರಕ್ಷಾ ಸಮಿತಿ' ರಚನೆ ಮಾಡಬೇಕೆಂಬುದರ ಬಗ್ಗೆ ಶಾಲಾ ಆಡಳಿತ ಮಂಡಳಿ ಯೋಚಿಸ ಬೇಕಾಗಿದೆ. ಸಮಿತಿಯ ಕಾರ್ಯ ವ್ಯಾಪ್ತಿ ಯಂತೆ ಆಯಾಯ ಶಾಲೆಗಳಲ್ಲಿ "ಸಿ.ಸಿ. ಕೆಮರಾ" ಕಡ್ಡಾಯವಾಗಿ ಅಳವಡಿಸ ಬೇಕೆಂದೂ ನಿಯಮ. ಹೀಗಾಗಿ ಶಾಲೆಗಳ ಆಡಳಿತ ಮಂಡಳಿ-ಅಧ್ಯಾಪಕ ವೃಂದ ಪರದಾಡು ವಂತಾಗಿದೆ.

ಏಕೆಂದರೆ ಕನಿಷ್ಠ ನಾಲ್ಕು ಸಿ ಸಿ ಕೆಮರಾ ಮತ್ತು ಅದಕ್ಕೆ ಸಂಬಂಧಪಟ್ಟ ಸಹ ಉಪಕರಣಗಳನ್ನು ಅಳವಡಿಸುವ ಕನಿಷ್ಠ ಖರ್ಚು ರೂ. 25000/- ಆಗುತ್ತದೆ ಎಂಬುದು ಅಂದಾಜು ಲೆಕ್ಕಾಚಾರ. ಕೆಲವು ಶಾಲೆಗಳಲ್ಲಿ ವಿದ್ಯಾರ್ಥಿಗಳ ಕೊರತೆ-ಶಿಕ್ಷಕರ ತರಬೇತಿಗಳು-ಅಕ್ಷರ ದಾಸೋಹ, ಕ್ಷೀರಭಾಗ್ಯದ ಅನುಷ್ಠಾನ ಮೊದಲಾದ ಕೆಲಸದ ಒತ್ತಡದಿಂದ ಸರಿಯಾಗಿ ತರಗತಿಗೆ ಹೋಗುವುದು-ವಿದ್ಯಾರ್ಥಿಗಳಿಗೆ ಒಂದಿಷ್ಟು ಏನನ್ನಾದರೂ ಬೋಧಿಸುವುದೂ ಅಸಾಧ್ಯವಾಗಿದೆ. ಯಾವುದೇ ಫೀಸು ವಿದ್ಯಾರ್ಥಿಗಳಿಂದ-ಹೆತ್ತವರಿಂದ ಪಡೆಯದಿರುವ ಇಂತಹ ಶಾಲೆಗಳು ಈ ಖರ್ಚು ವೆಚ್ಚವನ್ನು ಭರಿಸುವುದೆಂತು?


ಇನ್ನು ಸಿ ಸಿ ಕೆಮರಾ ಅಳವಡಿಸಿದರೆ ಮಾತ್ರಾ ಈ ದೌರ್ಜನ್ಯ-ಸಮಸ್ಯೆಗಳನ್ನು ನಿರ್ಮೂಲ ಮಾಡಬಹುದೇ? ಕಳೆದ ತಿಂಗಳು ಸುಮಾರು ೮೦ ಸಿ ಸಿ ಕೆಮರಾ ಅಳವಡಿಸಿದ್ದ ಬಹು ದೊಡ್ಡ ಸನಿವಾಸಿ ಶಾಲೆಯೊಂದರ ವಿದ್ಯಾರ್ಥಿನಿ ಹೇಳದೆ ಕೇಳದೆ ಪರಾರಿಯಾಗಿದ್ದು, ಬಹುದೊಡ್ಡ ಪ್ರಕರಣವೇ ಆಗಿಲ್ಲವೇ?

ಸಿ ಸಿ ಕೆಮರಾ ಅಳವಡಿಸಿದ್ದರೆ ವಿದ್ಯಾರ್ಥಿಯಾಗಲಿ ಶಾಲಾ ಸಿಬ್ಬಂದಿಯಾಗಲಿ ಅದರ ಎದುರಲ್ಲಿ ನಿಂತು ಯಾವುದೇ ಅಪರಾಧ ಮಾಡಿಯಾನೆ? ಅಥವಾ ತಾನು ಅಪರಾಧ ಮಾಡುವಾಗ ಕೆಮರಾ ಕಣ್ಣು ತಪ್ಪಿಸಿ ಆ ಕೃತ್ಯ ಮಾಡಬೇಕೆಂಬ ಪ್ರಜ್ಞೆ ಇಲ್ಲದಿರುತ್ತದೆಯೇ? ಎ ಟಿ ಎಮ್ ಅಥವಾ ಬ್ಯಾಂಕುಗಳಲ್ಲಿ ಈ ಕೆಮರಾ ಕಣ್ಣು ತಪ್ಪಿಸಿ ದರೋಡೆ ಮಾಡಿರುವ ಎಷ್ಟು ಪ್ರಕರಣಗಳು ವರದಿಯಾಗಿಲ್ಲ? ಇವೆಲ್ಲಾ ಬಹಳಷ್ಟು ಯೋಚಿಸಬೇಕಾದ ವಿಚಾರ.

ಇನ್ನು-ಸರಕಾರ ಒಂದು ಕಾನೂನು ಮಾಡುತ್ತದೆ; ಅಧಿಕಾರಿಗಳು ಅದನ್ನು ಜ್ಯಾರಿಗೆ ತರಲು ಹೆಣಗಾಡುತ್ತಾರೆ; ಅದರಂತೆ ಸಂಬಂಧಪಟ್ಟ ತಮ್ಮ ಕೈಕೆಳಗಿನ ಅಧಿಕಾರಿಗಳಿಗೆ ಆದೇಶ ನೀಡಿ ತಮ್ಮ ಕೈತೊಳೆದುಕೊಳ್ಳುತ್ತಾರೆ. ಇವೆಲ್ಲವೂ ಅರ್ಥವಿಲ್ಲದ, ನಿಷ್ಪ್ರಯೋಜಕ ಹಾಗೂ ಶಾಲೆಗಳ ಆಡಳಿತ ವರ್ಗ ಹಾಗೂ ಅಧ್ಯಾಪಕ ವೃಂದಕ್ಕೆ ಕಿರಿ ಕಿರಿ ಉಂಟುಮಾಡುವ ವಿಚಾರವಾಗಿದೆ.

ಇವೆಲ್ಲಕ್ಕಿಂತಲೂ ಜನರಲ್ಲಿ-ಶಾಲಾ ಅಧ್ಯಾಪಕ-ಅಧ್ಯಾಪಕಿಯರಲ್ಲಿ- ವಿದ್ಯಾರ್ಥಿಗಳಲ್ಲಿ ಮಾನಸಿಕವಾಗಿ ಸನ್ನಡತೆ, ಸುಸಂಸ್ಕೃತಿ, ಇತರರ ಬಗ್ಗೆ ಗೌರವ ಹೊಂದುವುದು ಮೊದಲಾದ ಸದ್ಗುಣಗಳನ್ನು ಮೂಡಿಸಲು ಪ್ರಯತ್ನಿಸುವುದು ಮುಖ್ಯವಾಗಿದೆಯಲ್ಲವೇ?

# ಕನ್ನಡ ಕವಿಕಾವ್ಯ ಪರಿಚಯ-೧೧ : ಷಟ್ಪದಿ ಕವಿ ರಾಘವಾಂಕ-3



- ಹರಿದಾಸ ಮ.ನಾ.ಹೆಬ್ಬಾರ
ಎಂ.ಎ., ಬಿ.ಎಡ್.

## 'ಚೆನ್ನ ಬಸವ ಪುರಾಣ'

'ಭೈರವೇಶ್ವರ ಕಾವ್ಯದ ಕಥಾ ಸೂತ್ರ ರತ್ನಾಕರ' ಮತ್ತು 'ಗುರುರಾಜ ಚಾರಿತ್ರ' ಎಂಬ ಈ ಮೂರು ಗ್ರಂಥಗಳ ಪ್ರಕಾರ ರಾಘವಾಂಕನ ಪಂಪಾಪುರದ ದೇವರಾಜ, ನರಸಿಂಹ ಬಲ್ಲಾಳ, ಓರುಗಲ್ಲಿನ (ಓರುಗಲ್ಲಿನ) ರುದ್ರ ಪ್ರತಾಪ ಇವರೆಲ್ಲರೂ ಸಮಕಾಲೀನರಾಗುತ್ತಾರೆ. ಇದು ಸಂಭವವಾಗಬೇಕಾದರೆ ರಾಘವಾಂಕನು ಕ್ರಿ.ಶ. ಸುಮಾರು 1280-90ರಲ್ಲಿ ಇದ್ದಿರಬೇಕೆಂದು ರೆ।ಕಿಟ್ಟಲ್ ಮತ್ತು ಡಾ।ವೆಂಕಟಸುಬ್ಬಯ್ಯನವರೂ ಸುಮಾರು 1135ರಲ್ಲಿ ಇದ್ದಿಬೇಕೆಂದು ಡಾ। ನರಸಿಂಹಾ ಚಾರ್ಯರೂ ಅಭಿಪ್ರಾಯ ಪಡುತ್ತಾರೆ. ನರಸಿಂಹ ಬಲ್ಲಾಳನು 1ನೇ ನರಸಿಂಹ ಹೊಯ್ಸಳ (1123-1171), ರುದ್ರಪ್ರತಾಪನು 1162ರಲ್ಲಿ ಇದ್ದ ರುದ್ರದೇವ, ದೇವ ರಾಜನು ಯಾರೋ ಗೊತ್ತಿಲ್ಲ-ಎಂಬುದು ಡಾ। ನರಸಿಂಹಾಚಾರ್ಯರ ಹೇಳಿಕೆ. ಆದರೆ ಈ ನರಸಿಂಹ ಬಲ್ಲಾಳನು (ಮೂರನೆಯ ನರಸಿಂಹ ಹೊಯ್ಸಳನ ಮಗನಾದ) ಮೂರನೆಯ ಬಲ್ಲಾಳ (1291-1342), ರುದ್ರ ಪ್ರತಾಪನು ಈ ಮೂರನೆಯ ಬಲ್ಲಾಳನ ಸಮಕಾಲೀನನಾದ ಓರುಗಲ್ಲಿನ ಪ್ರತಾಪ ರುದ್ರ, ಪಂಪಾಪುರದಲ್ಲಿ ದೇವರಾಜನೆಂಬ ಒಬ್ಬ ಸಣ್ಣ ರಾಜನಿದ್ದಿರಬಹುದು-ಎಂಬುದು ಡಾ।ವೆಂಕಟಸುಬ್ಬಯ್ಯನವರ ಮತ. ಮೇಲೆ, ಅಂತರ್‌ಪ್ರಮಾಣ ಮುಂತಾದ ಕಾರಣ ಗಳಿಂದ ರಾಘವಾಂಕನು ಕ್ರಿ.ಶ.1200ರ ಮೇಲೆ ಇದ್ದಿರಬಹುದೆಂದು ಮಾಡಿರುವ ಊಹೆಗೆ ಡಾ। ವೆಂಕಟಸುಬ್ಬಯ್ಯನವರ ಮತವು ಪೋಷಕವಾಗಿರುತ್ತದೆ.

ವಸ್ತುಶ: ರಾಘವಾಂಕನ ಕಾಲವಾದ 300-400 ವರ್ಷಗಳ ಮೇಲೆ ಬರೆದ 'ರಾಘವಾಂಕ ಚಾರಿತ್ರ' ಮುಂತಾದ ಗ್ರಂಥಗಳ ಹೇಳಿಕೆಗೆ ಎಷ್ಟು ಬೆಲೆ ಕೊಡಬೇಕೆಂದು ನಿರ್ಧರಿಸುವುದು ಕಷ್ಟ. ಅವೇನು ಚರಿತ್ರೆಗಳೆಂದು ಬರೆದ ಗ್ರಂಥಗಳಲ್ಲ. ಜನಜನಿತವಾಗಿ ತಿಳಿಯಬಂದ ಸಂಗತಿಗಳು ಕಾವ್ಯದಲ್ಲಿ ಪ್ರತಿಪಾದಿತವಾದಾಗ ಒಂದು ಕಾಲದಿಂದ ಮತ್ತೊಂದು ಕಾಲಕ್ಕೆ ಬಣ್ಣವೇರಿ ಬದಲಾಯಿಸುತ್ತ ಹೋಗುವುದು ಸ್ವಭಾವ. ಆದ್ದರಿಂದಲೇ ಈ ಗ್ರಂಥಗಳಲ್ಲಿ ಚರಿತ್ರಕಾರರಿಗೆ ಸಮ್ಮತವಲ್ಲದ ಸಂಗತಿಗಳೂ ಪರಸ್ಪರ ವಿರೋಧಗಳೂ ಕಂಡು ಬರುತ್ತವೆ. ಕೆಲವು ಕನ್ನಡ ಕವಿಗಳ ಜೀವನ ಕಾಲ ವಿಚಾರ' ಎಂಬ ಗ್ರಂಥದ ಪುಟಗಳು 171-73ರಲ್ಲಿದೆ.) ಆದ್ದರಿಂದ ರಾಘವಾಂಕನು ಸುಮಾರು ಕ್ರಿ.ಶ 1280ರಲ್ಲಿ ಇದ್ದಿರಬಹುದೆಂದು ಸ್ಥೂಲವಾಗಿ ಹೇಳಬಹುದು.

(ಮುಂದುವರಿಯುವುದು)

# ರಂಗೋಲಿ ರಂಗಮ್ಮ

- ಜಿ.ಕೆ.ಕೋಲ್ಪೆ, ಉಡುಪಿ.

ಶ್ರೀಮತಿ ರಂಗಮ್ಮನ ನಿಜನಾಮ ದೇಯ ಬೇರೆಯೇ ಇದೆ. ನಮಗೆಲ್ಲರಿಗೂ ಅವರು ರಂಗೋಲಿ ರಂಗಮ್ಮ. ನಮ್ಮ ಪರಿಸರದಲ್ಲಿ ಅವರೋರ್ವ ಗೌರವಾನ್ವಿತ ಮಹಿಳೆ. ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರಾಗಿ ಕರ್ತವ್ಯ ನಿರ್ವಹಿಸುತ್ತಾ, ಮಕ್ಕಳ ವಿದ್ಯಾಭ್ಯಾಸಕ್ಕೋಸ್ಕರ ಈ ಊರಲ್ಲಿ ನೆಲೆಸಿ ಒಳ್ಳೆಯ ಹೆಸರು ಗಳಿಸಿದ್ದಾರೆ. ಅವರ ಪತಿ ಸರಕಾರದ ಉನ್ನತ ಹುದ್ದೆಯಲ್ಲಿದ್ದು ಬೇರೆ ಊರಲ್ಲಿ ಕರ್ತವ್ಯ ನಿರತರಾಗಿದ್ದಾರೆ. ಇಂತಿಪ್ಪ ಶ್ರೀಮತಿ ರಂಗಮ್ಮನ ಹವ್ಯಾಸದ ಬಗ್ಗೆ ನನ್ನ ಒಂದೆರಡು ಅನಿಸಿಕೆಗಳು. ಉಷಃ ಕಾಲದಲ್ಲಿ ಎದ್ದು ತಮ್ಮ ಕಾರಿನ ಹಿಂಬದಿ ಆಸನದಲ್ಲಿ ನಾನಾರೀತಿಯ ಬಣ್ಣದ ಹುಡಿಗಳನ್ನು ಹಾಗೂ ವಿವಿಧ ಹೂವಿನ ಎಸಳುಗಳನ್ನು ಜೋಡಿಸಿಕೊಂಡು, ಅಗತ್ಯವಿದ್ದಾಗ ಮಕ್ಕಳನ್ನೂ ಸಹಾಯಕ್ಕೆ ಕರೆಕೊಂಡು ಹೆಚ್ಚಾಗಿ ಶುಕ್ರವಾರದಂದು ಇಲ್ಲಿಯ ಸುತ್ತಮುತ್ತಲಿನ ದೇವಿ ದೇವಾಲಯಗಳ ಮುಂಭಾಗದಲ್ಲಿ (ಮುಖ್ಯವಾಗಿ ಅಂಬಲಪಾಡಿ, ಕಡಿಯಾಳಿ ಹಾಗೂ ನಮ್ಮ ಶಾರದಾ ದೇವಾಲಯ) ಭಕ್ತರು ಬರುವ ಮೊದಲೇ ಅತ್ಯಾಕರ್ಷಕ ರಂಗೋಲಿಯ ಚಿತ್ತಾರಗಳನ್ನು ಮೂಡಿಸಿ ತಮ್ಮ ಭಕ್ತಿಯ ಪರಾಕಾಷ್ಠೆಯನ್ನು ಪ್ರದರ್ಶಿಸಿ, ಸಾರ್ವಜನಿಕ ಪ್ರಶಂಸೆಗೆ ಪಾತ್ರರಾಗಿದ್ದಾರೆ. ಅದರಲ್ಲಿಯೂ ನವರಾತ್ರಿ ಹಾಗೂ ಇತರ ಹಬ್ಬಹರಿದಿನಗಳಲ್ಲಿ ಆ ರಂಗೋಲಿಯನ್ನು ನೋಡುವುದೇ ರಮಣೀಯ. ವಿಶೇಷವಾಗಿ ಅಂಬಲಪಾಡಿ ದೇವಾಲಯದಲ್ಲಿ ಬಿಡಿಸುವ ನವದವಸ ಧಾನ್ಯಗಳ ರಂಗೋಲಿ, ಅರಶಿನ ಕುಂಕುಮ, ಹೂ-ಹಣ್ಣು, ಬಳೆಗಳು, ಎಲೆ-ಅಡಿಕೆ, ಅಕ್ಕಿಯ "ಮಡಿಲಕ್ಕಿ" ರಂಗೋಲಿ ಭಕ್ತರಿಂದ ಹಾಗೂ ಅಲ್ಲಿಯ ವ್ಯವಸ್ಥಾಪನಾ ಸಮಿತಿಯವರಿಂದಲೂ ಶ್ಲಾಘಿಸಲ್ಪಟ್ಟಿದೆ. ಅದರ ಚಂದವನ್ನು ಬಹಳಷ್ಟು ಮಂದಿ ಕೆಮರಾಗಳಲ್ಲಿ ಕ್ಲಿಕ್ಕಿಸಿದವರೂ ಇದ್ದಾರೆ. ಇವರ ಈ ಕೈಂಕರ್ಯ ಅವ್ಯಾಹತವಾಗಿ ಕೆಲವು ವರ್ಷಗಳಿಂದ ನಡೆಯುತ್ತಾ ಇದೆ. ಭಗವತ್ ಸೇವೆಯನ್ನು ತಮ್ಮ ಕೈಚಳಕದಿಂದ ರಂಗೋಲಿ ರೂಪದಲ್ಲಿ ಸಮರ್ಪಿಸುತ್ತಾ, ತಮ್ಮ ಕುಟುಂಬ ಹಾಗೂ ಸಮಾಜದ, ಮುಖ್ಯವಾಗಿ ಅಮಾಯಕ ಮಕ್ಕಳ ಮತ್ತು ಶೋಷಿತ ಮಹಿಳೆಯರ (ಅವರೇ ಹೇಳಿದಂತೆ) ಶ್ರೇಯಸ್ಸಿಗೆ ಮುಡಿಪಾಗಿಟ್ಟಿದ್ದಾರೆ. ಪ್ರಚಾರದಿಂದ ದೂರ ಉಳಿದು, ತಮ್ಮ ಆತ್ಮೋದ್ಧಾರವನ್ನು ತಾವೇ ಮಾಡಿಕೊಳ್ಳುತ್ತಿದ್ದಾರೆ. ಇವರಿಗೆ ಸಂಗೀತದೊಂದಿಗೆ ವೀಣೆ ಕಲಿಯುವ ಹವ್ಯಾಸವೂ ಇದೆ. ದೈವಿಕ ಕಾರ್ಯಗಳನ್ನು ಆಗಾಗ ನಡೆಸುತ್ತಾ ಬಂಧು-ಮಿತ್ರರನ್ನು ತಮ್ಮ ಮನೆಗೆ ಆಹ್ವಾನಿಸಿ ಸತ್ಕರಿಸುತ್ತಾರೆ. ಪ್ರಸಾದ ವಿತರಿಸಿ ಹಿರಿಯರ ಕಾಲಿಗೆ ಅಡ್ಡಬಿದ್ದು ಆಶೀರ್ವಾದ ಬೇಡುತ್ತಾರೆ. ಮಕ್ಕಳಿಗೂ ಈ ಸಂಸ್ಕೃತಿ ಕಲಿಸಿದ್ದಾರೆ. ಸುಸಂಸ್ಕೃತರಾಗಿ ಬೆಳೆಯಲು ಹಾಗೂ ರಂಗೋಲಿಯಲ್ಲಿ ಪರಿಣಿತರಾಗಲು ಇವರ ಮಾತಾ-ಪಿತೃಗಳ ಶ್ರಮವನ್ನು ನೆನಪಿಸುವ ನಮ್ಮ ರಂಗೋಲಿ ರಂಗಮ್ಮ ಬೇರಾರೂ ಅಲ್ಲ ಶಾರದಾ ಕಲ್ಯಾಣ ಮಂಟಪ ಸಮೀಪದ ಸುರಮ್ಯಾ ವಸತಿ ಸಂಕೀರ್ಣದಲ್ಲಿ ವಾಸಿಸುತ್ತಿರುವ ಮೂಲತಃ ಆಂಧ್ರ ಪ್ರದೇಶದ ಶ್ರೀಮತಿ ವನಿತಾ ಎನ್. ತೊರವಿಯವರು. ಇವರು ಎಮ್.ಎ., ಪಿಹೆಚ್.ಡಿ. (M.A., Ph.D) ಪದವೀಧರೆ. ಮೂರು ಮಕ್ಕಳ ತಾಯಿ.


ನಮ್ಮ ಸ್ಥಾನಿಕ ಸಮಾಜದಲ್ಲೂ ಸಾಕಷ್ಟು ಮಂದಿ ಈ ಕಲಾ ಪ್ರಕಾರವನ್ನು ಪ್ರೋತ್ಸಾಹಿಸುವವರು ಹಾಗೂ ರಂಗೋಲಿ ಹಾಕುವವರೂ ಇದ್ದಾರೆ. ಆದರೆ, ರಂಗಮ್ಮನ ಹಾಗೆ ನಿರಂತರ ಸೇವೆ ಮಾಡುವವರು ಅತೀ ವಿರಳ. ಹೇಗೂ ಇರಲಿ, ಈ ರಂಗೋಲಿ ಸಂಸ್ಕೃತಿ ಬೆಳಗಬೇಕಾದರೆ ಇನ್ನಷ್ಟು "ರಂಗಮ್ಮ ನವರು" ಬೆಳಕಿಗೆ ಬರಲೆಂದು ಹಾರೈಸೋಣವೇ?

**ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)**
ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101. ಫೋನ್ : 2522408

**2012ರ ಮಾಡೆಲ್‌ನ ಬಜಾಜ್-ಡೀಸೆಲ್-ರಿಕ್ಷಾ ಮಾರಾಟಕ್ಕಿದೆ.**

ಆಸಕ್ತರು ಹೆಚ್ಚಿನ ವಿವರಗಳಿಗೆ ಈ ಕೆಳಗಿನ ದೂರವಾಣಿಯನ್ನು ಸಂಪರ್ಕಿಸಲು ಕೋರಲಾಗಿದೆ.
**0820-2522408, 9591314892**

-ಕಾರ್ಯದರ್ಶಿ



ಎಮ್. ದೇವಾನಂದ್ ಭಟ್
Cell : 9845644556
9483913344



ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ
ಬೆಳ್ವಾಯಿ-574213 (08258)-276177 (O)
ಮೂಡಬಿದ್ರಿ, ಲಾವಂತ ಕಾಂಪ್ಲೆಕ್ಸ್ 9901995655
ಎಡಪದವು - 574 164 (0824)-2256374 (O) ಮಂಗಳೂರು, ದ.ಕ.
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

**ಶ್ರೀಶಾರದಾ ವೇದಿಕೆಯ ಮಹಾ ಪೋಷಕರು :** ದಿ। ಅಂಬಲಪಾಡಿ ಕೃಷ್ಣ ರಾವ್, ಡಾ। ಪಿ. ವಿಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ದಿ। ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ। ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ, ವೈ. ಶಂಕರನಾರಾಯಣರಾವ್ ಪಡುಬಿದ್ರಿ, ವೈ. ಮೋಹನ ರಾವ್ ಅಂಬಲಪಾಡಿ, ಬೆಳ್ಳೆ ಶ್ರೀನಿವಾಸ ರಾವ್ ಮುಂಬೈ, ಡಾ। ವೈ. ಸುದರ್ಶನ ರಾವ್ ಕುಕ್ಕಿಕಟ್ಟೆ, ಕಟ್ಟೆ ವೆಂಕಟ್ರಾವ್ ಪಲಿಮಾರು, ಮಟ್ಟು ದಿವಾಕರ ರಾವ್ ಮುಂಬಯಿ, ಕೆ.ಉಮೇಶ್ ರಾವ್ ಕುಡಾಲ್, ಕೆ.ವೆಂಕಟರಮಣರಾವ್ ಕುಡಾಲ್, ಕಡಂದಲೆ ಶ್ರೀಪತಿ ರಾವ್ ಅಧಿಕಾರಿ ಮುಂಬೈ, ಅಂಬಲ್ಪಾಡಿ ರಾಘವೇಂದ್ರ ರಾವ್ ಬೆಂಗಳೂರು, ಅದ್ಯಪಾಡಿ ವಸಂತ ಕುಮಾರ್, ಎಸ್.ಉಮೇಶ್ ರಾವ್ ಮಾಣಿಬೆಟ್ಟು, ಶ್ರೀಮತಿ ಸವಿತಾ ಮೋಹನ್‌ರಾವ್ ಕಬ್ಯಾಡಿ, ಪ್ರಫುಲ್ಲಚಂದ್ರರಾವ್ ಉಡುಪಿ, ಕೃಷ್ಣಕುಮಾರ್‌ರಾವ್ ಮಟ್ಟು, ಚಿಟ್ಪಾಡಿ ಭುಜಂಗರಾವ್, ಕೋಲ್ಪೆ ಗೋಪಾಲಕೃಷ್ಣ ರಾವ್, ಯು.ಆರವಿಂದ ಕುಮಾರ್ ಮಣಿಪಾಲ, ಕಿಶೋರ್ ಭಾಸ್ಕರ್ ರಾವ್ ಮುಂಬಯಿ, ವೈ.ವಿಠಲರಾವ್ ಚಿಟ್ಪಾಡಿ

## ಉಡುಪಿ-ಮಂಗಳೂರಿನ ಸಮಾಜ ಬಾಂಧವರಿಂದ ಮುಂಬೈ ಪ್ರವಾಸ



### ರೈಲಿನಲ್ಲಿ ಮನರಂಜನೆ

ನಂತರ ಅವರವರ ಸೀಟುಗಳಿಗೆ ಒರಗಿದ ಪ್ರಯಾಣಿಕರು ತಮ್ಮ ತಮ್ಮೊಳಗೆ ಸುಖ ಕಷ್ಟ ಮಾತನಾಡುತ್ತಾ ವಿಚಾರಣೆಗೆ ತೊಡಗಿದರು. ಒಂದು ಕಡೆ ಒಂದುತಂಡ ಅಂತ್ಯಾಕ್ಷರಿಯಲ್ಲಿ ತೊಡಗಿದರೆ ಮತ್ತೊಂದು ಕಡೆ ಇಸ್ಪೀಟಿನ ಎಲೆ ತೆಗೆದು ಕತ್ತೆಯಾಟದಲ್ಲಿ ತೊಡಗಿತು. ಈ ನಡುವೆ ಉಡುಪಿಯ ಹೊಟೇಲ್ ರಾಮಕೃಷ್ಣದ ಆಮಂತ್ರಣ ರೆಸ್ಟಾರೆಂಟ್‌ನಿಂದ ತಂದ ಬಿಸಿ ಬಿಸಿ ಬನ್ಸ್ ಎಲ್ಲರಿಗೂ ಹಂಚಲಾಯಿತು.

### ರಾತ್ರಿಯ ಊಟ

ರೈಲು ಮಡ್‌ಗಾಂ ದಾಟಿ ಸಾಗುತ್ತಿದ್ದಂತೆಯೇ ಸುಮಾರು 9.30ರ ಸುಮಾರಿಗೆ ರಾತ್ರಿ ಊಟಕ್ಕೆ ತಯಾರಿ ನಡೆಯಿತು. ನಮ್ಮ ತಂಡದಲ್ಲಿದ್ದ ಶ್ರೀ ಶಾರದಾ ಮಂಟಪದ ಮೆನೇಜರ್ ಶ್ರೀ ಅಜಿತ್ ಕುಮಾರ್‌ರ ವ್ಯವಸ್ಥೆಯಲ್ಲಿ ರಾತ್ರಿ ಊಟಕ್ಕೆ ಪಲಾವ್-ಚಪಾತಿ-ಕೂರ್ಮ ಎಲ್ಲರಿಗೂ ಬಡಿಸಲಾಯಿತು. ಯಥೇಷ್ಟ ಚಪಾತಿ ಹಾಗೂ ಪುಲಾವ್ ಎಲ್ಲರಿಗೂ ವಿಚಾರಣೆ ಮಾಡಿದ ಮೇಲೆ ಉಳಿದ ಈ ತಿನಿಸುಗಳನ್ನು ಬಿಸಾಡಲು ಮನಸ್ಸು ಬಾರದೆ ರೈಲಿನಲ್ಲಿದ್ದ ಇತರ ಪ್ರಯಾಣಿಕರಿಗೂ ಮನಸಾರೆ ಬಡಿಸಲಾಯಿತು. ನಮ್ಮ ಬೋಗಿಗಿಂತ 3-4 ಬೋಗಿಗಳ ಆಚೆವರೆಗೂ ಹೋಗಿ ಪಲಾವ್ ಖಾಲಿ ಮಾಡಿ ಬಂದರು. ಊರಿನ ತಿಂಡಿ ಎಂದು ತಿಳಿದ ಕೆಲವು ಪ್ರಯಾಣಿಕರು ಪಲಾವ್ ಕೇಳಿ ಪಡೆದರಂತೆ. ಕೊನೆಗೂ ಅಕ್ಷಯ ಪಾತ್ರೆ ಖಾಲಿಯಾಗಿ ತೊಳೆದಿಟ್ಟರು.

ನಂತರ ಎಲ್ಲರಿಗೂ ಸ್ಲೀಪಿಂಗ್ ಬರ್ತ್‌ನಲ್ಲಿ ನಿದ್ರೆಗೆ ವ್ಯವಸ್ಥೆ ಮಾಡಲಾಯಿತು. ಎಲ್ಲರೂ ಸ್ವಲ್ಪ ಹೊತ್ತಿನಲ್ಲಿ ಹರಟುವುದನ್ನು ನಿಲ್ಲಿಸಿ ನಿದ್ದೆಗೆ ಶರಣಾದರು. ಆದರೂ ರಾತ್ರಿಯ ಪ್ರಯಾಣದಲ್ಲಿ ಇತರರಿಂದ ನಮ್ಮವರಿಗೆ-ನಮ್ಮ ಲಗೇಜುಗಳಿಗೆ ಏನೊಂದೂ ತೊಂದರೆಯಾಗದಿರಲಿ ಎನ್ನುವ ಎಚ್ಚರಿಕೆಯಿಂದ 3-4 ಮಂದಿ ನಮ್ಮವರು ಪಾಳಿಯಂತೆ ಕಾವಲು ಕಾಯುತ್ತಿದ್ದುದು, ನಮ್ಮಲ್ಲಿ ಹೆಚ್ಚಿನವರಿಗೆ ತಿಳಿಯದ ವಿಚಾರ.

### 2 ಗಂಟೆ ತಡವಾಗಿ ಮುಂಬೈಗೆ

ಬೆಳಗಿನ ಜಾವ 6.30ಕ್ಕೆ ತಲುಪಬೇಕಾದ ನಮ್ಮ ರೈಲು ಚಾಲಕನ ಉದಾರತೆಯಿಂದ ಹಿಂದಿನಿಂದ- ಮುಂದಿನಿಂದ ಬರುವ ರೈಲುಗಳಿಗೆಲ್ಲಾ ದಾರಿಬಿಡುವ ನೆಪದಲ್ಲಿ ಅಲ್ಲಲ್ಲಿ ನಿಂತು- ನಿಧಾನವಾಗಿ ಚಲಿಸಿ ಮುಂಬೈಗೆ ಬೆಳಿಗ್ಗೆ 8.45 ಗಂಟೆಗೆ ಲೋಕಮಾನ್ಯ ತಿಲಕ್ ನಿಲ್ದಾಣಕ್ಕೆ ಬಂದು ತಲುಪಿತು. ಯಾವಾಗ ರೈಲಿನಿಂದ ಇಳಿದೇವು ಎಂಬ ಭಾವನೆಯಿಂದ ಬೆಳಿಗ್ಗೆ 5.00 ಗಂಟೆಗೆ ಪ್ರಾರಂಭಗೊಂಡು ಇಳಿಯುವವರೆಗೂ ಕಾದದ್ದೇ ಬಂತು. ಅಲ್ಲಿ ಇಳಿದಾಗ ಮುಂಬೈ ಸಂಘದ ಶ್ರೀ ಉಮೇಶ್ ರಾವ್ ನಮ್ಮನ್ನು ಎದುರುಗೊಂಡರು. "ನಿಮಗಾಗಿ ಬಸ್ಸು ತಯಾರಿ ಇದೆ. ಹೊರಡೋಣ" ಎಂದರು. ನಮ್ಮ ನಮ್ಮ ಲಗೇಜುಗಳಲ್ಲದೆ ವೇಷಭೂಷಣಗಳ ದೊಡ್ಡ ಪೆಟ್ಟಿಗೆಗಳನ್ನು ಹೇರಿಕೊಂಡು ಮುಂಬೈ ಸಯಾನಿನ ಗೋಕುಲ್ ಹಾಲ್ ತಲುಪಿದೆವು.

### ಸ್ನಾನ-ಬೆಳಗಿನ ಉಪಾಹಾರ

ಗೋಕುಲ್ ಹಾಲ್‌ನ ಮೇಲಿನ ಕೊಠಡಿಗಳಲ್ಲಿ ನಮ್ಮವರಿಗೆ ಹೆಂಗಸರು ಹಾಗೂ ಗಂಡಸರಿಗೆ ಪ್ರತ್ಯ ಪ್ರತ್ಯೇಕ ವಾಸ್ತವ್ಯದ ವ್ಯವಸ್ಥೆ ಮಾಡಲಾಗಿತ್ತು. ಮೊದಲು ಎಲ್ಲರೂ ಸ್ನಾನಾದಿಗಳನ್ನು ಪೂರೈಸಿಕೊಂಡೆವು. ನಂತರ ಬೆಳಗಿನ ತಿಂಡಿಗೆ ಬಿಸಿಬಿಸಿ ದೋಸೆ-ಪುಂಡಿಗಟ್ಟಿ-ಬೋಂಡದೊಂದಿಗೆ ಚಹಾ ಸ್ವೀಕರಿಸಿ, ಸಭಾಂಗಣದಲ್ಲಿ ನಡೆಯುತ್ತಿದ್ದ ಸೆಮಿನಾರ್‌ನಲ್ಲಿ ಪಾಲ್ಗೊಂಡರು.




■...1ನೇ ಪುಟದಿಂದ

### ಮಧ್ಯಾಹ್ನದ ಊಟ

ಮೇಲಿನ ಮಾಳಿಗೆಯಲ್ಲಿ ಕುಳಿತು ಊಟ ಮಾಡುವ ಎಲೆಯೂಟವು ಸಿದ್ಧವಾಗಿತ್ತು. ಅಲ್ಲದೆ ಕೆಳಗಿನ ಶಾಮಿಯಾನದಲ್ಲಿ ಬಫೆಯೂಟವೂ ಲಭ್ಯವಿತ್ತು. ಒಟ್ಟಿನಲ್ಲಿ ಊಟವಂತೂ ಭರ್ಜರಿಯಾಗಿತ್ತು. ಮೇಲೆ ಎರಡು ಮೂರು ಪಂಕ್ತಿಗಳಲ್ಲಿ ಕುಳಿತು ಸಮಾಜ ಬಾಂಧವರು ಊಟ ಸ್ವೀಕರಿಸಿದರು.

### ರಂಜಿಸಿದ ಎರಡು ಯಕ್ಷಗಾನ ಕಾರ್ಯಕ್ರಮಗಳು

ಮಧ್ಯಾಹ್ನದ ಊಟ ಮುಗಿಸಿದ ಯಕ್ಷಗಾನ ತಂಡದ ಕಲಾವಿದರು ಸಂಜೆ 6.30ಕ್ಕೆ ಪ್ರಾರಂಭಗೊಳ್ಳುವ ಪ್ರದರ್ಶನಕ್ಕೆ ಸಿದ್ಧರಾಗಲು ಬಣ್ಣ-ವೇಷದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಮೊದಲ ಪ್ರಸಂಗ ಬಡಗುತಿಟ್ಟು ಯಕ್ಷಗಾನ **ಜಾಂಬವತಿ ಕಲ್ಯಾಣ** ಉಡುಪಿಯ ಶ್ರೀ ಶಾರದಾ ಹವ್ಯಾಸಿ ಯಕ್ಷಗಾನ




ಕಲಾವಿದರಿಂದ ನೆರವೇರಿತು. ಯಕ್ಷಗಾನ ಕೇಂದ್ರದ ಗುರುಗಳಾದ ಶ್ರೀ ದೇವದಾಸ್ ಕೂಡ್ಲಿಯವರ ನಿರ್ದೇಶನದಲ್ಲಿ ನುರಿತ ಹಿಮ್ಮೇಳ ಕಲಾವಿದರಿಂದ ಮುಮ್ಮೇಳದಲ್ಲಿ ಶಿಸ್ತುಬದ್ಧ, ವೈವಿಧ್ಯಮಯ ಕುಣಿತ, ರಸಭರಿತ ಸನ್ನಿವೇಶ ಹಾಗೂ ವೈಚಾರಿಕ ಅರ್ಥಗಾರಿಕೆಯಿಂದ ಪ್ರೇಕ್ಷಕರನ್ನು ರಂಜಿಸಿದರೆ, ಎರಡನೇ ಪ್ರಸಂಗದಲ್ಲಿ ತೆಂಕುತಿಟ್ಟಿನ **ವಿದ್ಯುನ್ಮತಿ ಕಲ್ಯಾಣ**ವು ಶ್ರೀ ದೇವಾನಂದ ಭಟ್ ಇವರ ನಿರ್ದೇಶನದಲ್ಲಿ ಅಬ್ಬರದ ಹಿಮ್ಮೇಳದೊಂದಿಗೆ ವಿವಿಧ ಪ್ರಕಾರದ ವೇಷಭೂಷಣ, ಅರ್ಥಗಾರಿಕೆಯೊಂದಿಗೆ ಪ್ರೇಕ್ಷಕರನ್ನು ಹಿಡಿದಿಟ್ಟುಕೊಂಡಿತು. ಒಟ್ಟಿನಲ್ಲಿ ಎರಡೂ ತಿಟ್ಟುಗಳ ಈ ಯಕ್ಷಗಾನ ತಂಡಗಳು ಮುಂಬೈಗೆ ಅಪರೂಪದಲ್ಲಿ ಎಂಬಂತೆ ಆಗಮಿಸಿ ಯಶಸ್ವಿ ಪ್ರದರ್ಶನ ನೀಡಿ, ಮುಂಬೈಯಲ್ಲಿರುವ ನಮ್ಮ ಸಮಾಜ ಬಾಂಧವರು ಹುಬ್ಬೇರಿಸುವಂತೆ ಮಾಡಿತು. "ನಮ್ಮ ಸಮಾಜದ ಕಲಾವಿದರೇ ಹಿಮ್ಮೇಳ-ಮುಮ್ಮೇಳಗಳಲ್ಲಿದ್ದು, ನಮ್ಮ ಸಮಾಜದಲ್ಲಿಯೂ ಇಂತಹ ಶ್ರೇಷ್ಠ ಕಲಾವಿದರಿದ್ದಾರೆನ್ನುವುದು ಹೆಮ್ಮೆಯ ವಿಚಾರ" ಎಂದು ಹಲವಾರು ಮಂದಿ ಮಾತನಾಡಿಕೊಳ್ಳುತ್ತಿದ್ದುದು ಕೇಳಿ ಬಂತು.

### ರಾತ್ರಿ ಊಟ

ರಾತ್ರಿ ಊಟವನ್ನು ಮುಗಿಸಿದ ನಂತರ ಕೆಲವರು ಮುಂಬೈಯಲ್ಲಿರುವ ತಮ್ಮ ಬಂಧುಗಳ ಮನೆಗೆ ಅವರ ಜೊತೆ ತೆರಳಿದರೆ, ಕೆಲವರು ಗೋಕುಲ್‌ನಲ್ಲಿಯೇ ಮಲಗಿ ನಿದ್ದೆ ಹೋದರು.

### ಮರುದಿನದ ವ್ಯವಸ್ಥೆ

ಹಿಂದಿನ ದಿನ ಮಾತನಾಡಿಕೊಂಡಂತೆ ದಿನಾಂಕ 17ರಂದು ಬೆಳಿಗ್ಗೆ 9.30ಕ್ಕೆ ಎಲ್ಲರೂ ಮತ್ತೆ ಗೋಕುಲ್‌ಗೆ ಬಂದು ನಮ್ಮವರನ್ನು ಸೇರಿಕೊಂಡರು. ಬೆಳಗಿನ ಉಪಾಹಾರಕ್ಕೆ ಗುಂಡ-ಇಡ್ಲಿ-ಚಟ್ನಿ-ಸಾಂಬಾರ್-ಚಹಾ, ಕಾಫಿ ಸೇವಿಸಿದೆವು. ನಂತರ ಶೋಪಿಂಗ್‌ಗೆ ತೆರಳುವುದೆಂದು ನಿಶ್ಚಿತವಾಗಿತ್ತು. ಆದರೆ ಅಂದು ಸೋಮವಾರವಾದ್ದರಿಂದ ಸಯಾನ್ ಆಸುಪಾಸಿನಲ್ಲಿ ಪೇಟೆಯ ಮಳಿಗೆಗಳಿಗೆ ವಾರದ ರಜೆಯಂತೆ. ಆದ್ದರಿಂದ ಶೋಪಿಂಗ್‌ಗಾಗಿ ಬಾಂದ್ರಾದ ಲಿಂಕ್ ಪಾಯಿಂಟ್ ಕಡೆಗೆ ಪ್ರಯಾಣ ಮಾಡಬೇಕಾಯಿತು. ನಮ್ಮ ತಂಡದಲ್ಲಿದ್ದ ಮಹಿಳಾಮಣಿಗಳು ಸಿಕ್ಕಿದ ಮಳಿಗೆಗಳ ಒಳಗೆ ಹೋಗಿ ಬಂದು-ಎಲ್ಲಾ ಮುಕ್ತಾಯಗೊಂಡಾಗ ಕೈಯಲ್ಲಿ ಹಲವು ಪ್ಲಾಸ್ಟಿಕ್ ಚೀಲಗಳ ಗಂಟುಗಳೊಂದಿಗೆ ಹೊರಬಂದಾಗ ತಮ್ಮ ಪರ್ಸು ಜೇಬು ಖಾಲಿ ಮಾಡಿಕೊಂಡಿದ್ದರು. ಮತ್ತೆ ಐಸ್‌ಕ್ರೀಮ್ ಪಾರ್ಲರ್ ಹೊಕ್ಕು, ಸವಿದು 12.15ರ ಹೊತ್ತಿಗೆ ಸಯಾನ್‌ನ ಗೋಕುಲ್‌ಗೆ ವಾಪಾಸು ಬಂದೆವು. ಆಗ ನಮಗಾಗಿ ಮಧ್ಯಾಹ್ನದ ಊಟ ಸಿದ್ಧಗೊಂಡಿತ್ತು. ಹಿಂದಿನ ದಿನಕ್ಕೆ ಕಡಿಮೆ ಇಲ್ಲದಂತೆ ಇದ್ದ ಸಿಹಿ ಊಟವನ್ನು ಮಾಡಿ ಎಲ್ಲರೂ ಮರು ಪ್ರಯಾಣಕ್ಕೆ ಸಿದ್ಧರಾದೆವು.

ನಮ್ಮ ಎಲ್ಲಾ ಸಲಕರಣೆಗಳನ್ನು ಮತ್ತೆ ಬಸ್ಸಿನಲ್ಲಿ ಹೇರಿ ರೈಲು ನಿಲ್ದಾಣಕ್ಕೆ ಪ್ರಯಾಣ.

ನಾವು ಹೋಗುವ ಮೊದಲೇ ಬಂದು ನಿಂತಿದ್ದ ರೈಲಿನ ಖಾಲಿ ಬೋಗಿಗಳಲ್ಲಿ ನಮ್ಮ ಲಗೇಜುಗಳನ್ನು ವ್ಯವಸ್ಥಿತವಾಗಿ ಜೋಡಿಸಿಟ್ಟು, ನಮ್ಮ ನಮ್ಮ ಸೀಟುಗಳಲ್ಲಿ ಆಸೀನರಾದೆವು. ಸರಿಯಾಗಿ 3.25ಕ್ಕೆ ರೈಲು ತನ್ನ ಪ್ರಯಾಣ ಪ್ರಾರಂಭಿಸಿತು. ಮತ್ತೆ ಸಮಾಜ ಬಾಂಧವರಿಂದ ಮುಂಬೈ ಪ್ರಯಾಣದ ಅನುಭವ, ಯಕ್ಷಗಾನ ಪ್ರದರ್ಶನದ ವಿವರಣೆ, ತಮ್ಮ ಬಂಧುಗಳ ಮನೆಗಳಲ್ಲಿ ತಾವು ಪಡೆದ ಆತಿಥ್ಯದ ವಿವರ, ಅವರವರು ಖರೀದಿಸಿದ ವಸ್ತುಗಳ ವಿವರ ಮೊದಲಾದುವುಗಳನ್ನು ಚರ್ಚಿಸುತ್ತಾ ಪ್ರಯಾಣ ಮುಂದುವರಿಯಿತು. ಸಂಜೆ 6.00 ಗಂಟೆಗೆ ಪಾರ್ಸೆಲ್ ಮಾಡಿಸಿ ಕಟ್ಟಿಕೊಂಡು ಬಂದಿದ್ದ ಮುಂಬೈಯ ಪ್ರಸಿದ್ಧ ಪಾವ್‌ಬಾಜಿಯನ್ನು ಎಲ್ಲರಿಗೂ ಹಂಚಲಾಯಿತು. ನಂತರ ಒಂದು ಮಗ್ಗುಲಲ್ಲಿ ಇಸ್ಪೀಟು ಆಡುತ್ತಾ ಯಾರು ಹೆಚ್ಚುಸಲ ಕತ್ತೆಯಾಗುವುದೆನ್ನುವ ಸ್ಪರ್ಧೆಯಾದರೆ, ಮತ್ತೊಂದೆಡೆ ಅಂತ್ಯಾಕ್ಷರೀ ಸ್ಪರ್ಧೆ ನೆರವೇರಿತು. ಅದಲ್ಲದೆ ತೆಂಕು-ಬಡಗು ಹಿಮ್ಮೇಳದೊಂದಿಗೆ ಎಲ್ಲಾ ಕಲಾವಿದರ ಕೂಡುವಿಕೆಯಿಂದ ಚಲಿಸುತ್ತಿರುವ ರೈಲಿನಲ್ಲಿಯೇ "ಶೂರ್ಪನಖಾ" ಕಥಾನಕದ ಯಕ್ಷಗಾನ ತಾಳ ಮದ್ದಳೆಯೂ ನೆರವೇರಿತು.

### ರಾತ್ರಿ ಊಟ

ಮುಂಬೈ ಸಂಘದ ಪದಾಧಿಕಾರಿಗಳ ಕೃಪೆಯಿಂದ ವ್ಯವಸ್ಥೆಗೊಳಿಸಲಾದ ರಾತ್ರಿಗೆ ಬೇಕಾದ ಗುಂಡ, ಇಡ್ಲಿ, ಸಾಂಬಾರ್, ಚಪಾತಿ ಮೊದಲಾದುವುಗಳನ್ನು ಎಲ್ಲರಿಗೂ ವಿತರಿಸಿ ರಾತ್ರಿ ಊಟವನ್ನು ಪೂರೈಸಲಾಯಿತು. ಅಂದೂ ಕೂಡಾ ನಮ್ಮೊಂದಿಗೆ ಸಹ

(5ನೇ ಪುಟಕ್ಕೆ...)

# "ಸ್ಥಾನಿಕ ವೃಕ್ಷ" ರಚನೆ : ಸ್ಥಾನಿಕ ಸಮಾಜ ಬಾಂಧವರಲ್ಲಿ ಒಂದು ನಿವೇದನೆ

ಮಾನ್ಯರೇ,

ಸ್ಥಾನಿಕ ಬ್ರಾಹ್ಮಣರು ತುಳುನಾಡಿನ ಮೂಲ ನಿವಾಸಿಗಳಾಗಿದ್ದು ಈಗ ವಿಶ್ವಾದ್ಯಂತ ವಾಸಿಸುತ್ತಿದ್ದಾರೆ. "ಸ್ಥಾನಿಕ ಶಬ್ದವು ಸ್ಥಾನಿಕ ಬ್ರಾಹ್ಮಣರು ಸಮಾಜದ ಪ್ರಮುಖ ಆಡಳಿತಾತ್ಮಕ ಹುದ್ದೆಗಳಿಂದ ಬಂದುದಾಗಿದೆ. ಮೂಲತಃ ಈ ಶಬ್ದ ಸಂಸ್ಕೃತ ಭಾಷೆಯಿಂದ ಬಂದಿದ್ದು 'ಒಂದು ಜಾಗ', ಅಥವಾ 'ಹುದ್ದೆಯ ಅಧಿಕಾರಿ', 'ತೆರಿಗೆ ಸಂಗ್ರಹಣಾಧಿಕಾರಿ', 'ಆಡಳಿತಾತ್ಮಕ ಅಧಿಕಾರ ಹೊಂದಿದವನು', 'ಒಂದು ಪ್ರದೇಶದ ಸ್ಥಳೀಯ ಜನಾಂಗ' ಎಂದಾಗಿರುತ್ತದೆ. ಕರ್ನಾಟಕ ರಾಜ್ಯದಲ್ಲಿ ಸಾಮಾನ್ಯವಾಗಿ ದೇವಾಲಯಗಳ ಅಧಿಕಾರ ಸೂತ್ರ ಹಿಡಿದಿರುವವರು ಸ್ಥಾನಿಕ ಅಥವಾ ಸ್ಥಾನಪತಿ ಎಂದು ಗೌರವಿಸಲ್ಪಡುತ್ತಿದ್ದರು.

ಸ್ಥಾನಿಕ ಬ್ರಾಹ್ಮಣರು ಸಂಖ್ಯೆಯಲ್ಲಿ ಒಂದು ಸಣ್ಣ ಜನಾಂಗವಾಗಿದ್ದರೂ, ಪ್ರಸ್ತುತ ದೇಶಾದ್ಯಂತ ಅಲ್ಲದೆ ವಿದೇಶಗಳಲ್ಲೂ ಚೆಲ್ಲಿಹೋಗಿರುವುದರಿಂದ ಈ ಜನಾಂಗದ ಒಟ್ಟಾರೆ ವಿವರಗಳನ್ನು ಸಂಗ್ರಹಿಸಿಡುವ ಯಾವುದೇ ದಾಖಲೆ ಲಭ್ಯವಾಗುತ್ತಿಲ್ಲ. ಇತ್ತೀಚೆಗೆ ಎಲ್ಲ ಸ್ತರಗಳಲ್ಲಿ ಗಣಕೀಕರಣ (Computer Technology) ವ್ಯಾಪಾಕವಾಗಿ ಬಳಕೆಯಲ್ಲಿ ಬಂದ ಕಾರಣ ಹಾಗೂ ಬಹಳಷ್ಟು ಮಂದಿಗೆ ಗಣಕೀಕರಣ ವಿಭಾಗದಲ್ಲಿ ಅಪಾರವಾಗಿ ಉದ್ಯೋಗಾವಕಾಶ ಲಭಿಸಿರುತ್ತಾ ಇರುವುದರಿಂದ ಸ್ಥಾನಿಕ ಜನಾಂಗದವರು ದೇಶ ವಿದೇಶಗಳಲ್ಲಿ ಪಸರಿಸಿರುತ್ತಾರೆ. ಹಾಗಾಗಿ ಸ್ಥಾನಿಕ ಜನಾಂಗದ ವಿವರಗಳನ್ನು ಒದಗಿಸುವ ಉಚಿತ ದಾಖಲೆಯೂ ಕಾಣುತ್ತಿಲ್ಲ. ಪರಸ್ಪರ ತಿಳುವಳಿಕೆ ಹಾಗೂ ಸಂವಹನವೂ ಕುಟುಂಬಿಕ ನೆಲೆಯಲ್ಲಿ ಕುಟುಂಬದೊಳಗಿನ ಸದಸ್ಯರು ಹಾಗೂ ಸಮೀಪ ಸಂಬಂಧಿಗಳಲ್ಲಿ ಮಾತ್ರ ಸಾಧ್ಯವಾಗಿದೆ. ದೂರದ ಸ್ಥಳಗಳಿಗೆ ವಲಸೆ ಹೋಗಿ ನೆಲೆಸಿರುವ ಸಮಾಜ ಬಾಂಧವರೊಳಗಿನ ಸಂವಹನಕ್ಕೂ ಒಂದು ಮಾಧ್ಯಮ ಇಲ್ಲವಾಗಿದೆ.

ಯಾವುದಾದರೂ ಧಾರ್ಮಿಕ ಸಮಾರಂಭಗಳಲ್ಲಿ ಪರಸ್ಪರ ಭೇಟಿಯಾಗಿ ಮಾಹಿತಿಯನ್ನು ಹಂಚಿಕೊಂಡಾಗ ಅಲ್ಲಿರುವ ಹೆಚ್ಚಿನ ಸದಸ್ಯರು ಪರಸ್ಪರ ಒಂದಿಲ್ಲೊಂದು ಬಗೆಯಲ್ಲಿ ನಮಗೆ ಸಂಬಂಧಿಕರು ಎನ್ನುವುದು ತಿಳಿಯುತ್ತದೆ. ಮರುಕ್ಷಣ ಅಲ್ಲಿಂದ ಹೊರಬಂದು ನಮ್ಮ ನಮ್ಮ ಚಟುವಟಿಕೆಗಳಲ್ಲಿ ತೊಡಗಿಕೊಂಡಾಗ ಈ ಎಲ್ಲಾ ಪರಿಚಯ, ಸಂಬಂಧಗಳು ಮರೆಯಾಗಿ ಬಿಡುತ್ತವೆ. ಮತ್ತೊಮ್ಮೆ ಅವರನ್ನು ಬೇಟಿಯಾಗಿ ಪರಿಚಯ, ಸಂಬಂಧದ ಎಳೆಯನ್ನು ಮರುಸ್ಮರಿಸುವ ಅವಕಾಶ ಸಿಗಬಹುದೇ ಎಂಬುದು ಹೇಳಲಾಗದ್ದು. ಮರುಕಳಿಸಿದ ಸಂಬಂಧ ಸೇತು ಅದೃಶ್ಯವಾಗಿ ಬಿಡುತ್ತದೆ. ಅದನ್ನು ಮತ್ತೆ ನೆನಪಿಸಿಕೊಂಡು ಗಟ್ಟಿಗೊಳಿಸುವ ಒಂದು ಸಾಧನ ಪ್ರಸ್ತಕ ಬಳಕೆಯಲ್ಲಿಲ್ಲ. ಕೆಲವು ಸಂದರ್ಭಗಳಲ್ಲಿ ನಾವು "ಇಂತಹ ಕುಟುಂಬ" ದಿಂದ ಬಂದವರು ಅಥವಾ "ಇಂತಹ ಮೂಲಸ್ಥಳ"ಕ್ಕೆ ಸೇರಿದ್ದವರು ಎಂಬುದು ತಿಳಿದುಬಂದರೂ ಅದನ್ನು ಸಾಕ್ಷೀಕರಿಸುವ ಒಂದು ದೃಢೀಕರಣ ಮಾಧ್ಯಮ ಪ್ರಸಕ್ತ ಲಭ್ಯವಿಲ್ಲ. ಹಿಂದೆ ಒಂದು ಸ್ಥಳದಲ್ಲಿ ನೆಲೆಯಿದ್ದ ನಮ್ಮ ಹಿರಿಯರು ಹಲವಾರು ವರ್ಷಗಳ ಹಿಂದೆ ಬೇರೆ ಕಡೆ ವಲಸೆ ಹೋಗಿರಬಹುದು ಎಂಬ ವಿಷಯವೂ ಚರ್ಚೆ ಅಥವಾ ಜಿಜ್ಞಾಸೆ ಯಾ ಊಹೆಯ ವಿಷಯವಾಗಿ ಉಳಿಯುತ್ತದೆ.

ಈ ಸಮಸ್ಯೆಗೆ ಒಂದು ಸ್ಥಿರ/ಅಂತಿಮ ಪರಿಹಾರವನ್ನು ಕಂಡುಹಿಡಿಯುವ ನಿಟ್ಟಿನಲ್ಲಿ ನಮ್ಮ ಸಮಾಜದ ಹಿರಿಯರಾದ ದಿ॥ ಶಿವಶಂಕರರಾವ್, ದಿ॥ ಕಲ್ಪತರು ಶ್ರೀನಿವಾಸ ರಾವ್, ಶ್ರೀ ಎಲ್ಲೂರು ಶ್ರೀಧರ ರಾವ್, ವಿಂಗ್ ಕಮಾಂಡರ್ ದೇವರಾವ್ ಬೆಳ್ಳೆ, ಶ್ರೀ ಬೈಲಕೆರೆ ಗೋವಿಂದ ರಾವ್ ಮತ್ತು ಇತರ ಅನೇಕ ಗಣ್ಯರು ಗಣನೀಯವಾಗಿ ಶ್ರಮಿಸಿದ್ದಾರೆ. ದೇಶಾದ್ಯಂತ ಹರಡಿರುವ ಸ್ಥಾನಿಕ ಬಂಧುಗಳ "ವಂಶವೃಕ್ಷ" ವನ್ನು ಬರೆದಿಡುವುದೇ ಇದಕ್ಕೆ ಉತ್ತಮ ಪರಿಹಾರ ಎಂಬುದುದನ್ನು ಅವರು ಕಾರ್ಯಗತ ಮಾಡಿ ತೋರಿಸಿದ್ದಾರೆ. ಗಣಕೀಕರಣದಂತಹ ಒಂದು ಆಧುನಿಕ ಸಾಧನ ಅಲಭ್ಯವಾಗಿದ್ದ ಆ ಸಮಯದಲ್ಲಿ ಅವರ ಪ್ರಯತ್ನ ಒಂದು ನಿಯಮಿತ ಮಟ್ಟದಲ್ಲಿ ವಿವರಗಳನ್ನು ಬರೆದಿಡಲು ಮಾತ್ರ ಸಾಧ್ಯವಾಗಿತ್ತು. ವಂಶವಾಹಿನಿಯಲ್ಲಿ ಹರಿದುಬಂದ ಮುತ್ತಜ್ಜ/ಮುತ್ತಜ್ಜಿ, ಅಜ್ಜ/ಅಜ್ಜಿ, ತಂದೆ/ತಾಯಿ, ಮಗ/ಮಗಳು/ಅಳಿಯಂದಿರು/ಸೊಸೆಯಂದಿರು, ಮೊಮ್ಮಕಳು ಇತ್ಯಾದಿ ವಿವರಗಳನ್ನು ಪರಸ್ಪರ ಸಂಬಂಧದ ವಿವರಗಳೊಂದಿಗೆ ಬರೆದಿಡುವುದು ಈ ವಂಶವೃಕ್ಷದ ಮೂಲ ಮಾದರಿ. ಇದನ್ನೇ ಇಡೀ ಸಮಾಜಕ್ಕೆ ಸಮೀಕರಿಸಿದಾಗ ನಾವು ನಿರೀಕ್ಷಿಸುವ "ಸ್ಥಾನಿಕ ವಂಶವೃಕ್ಷ" ಪ್ರಕಟಗೊಳ್ಳುತ್ತದೆ.

ಈಗ ಕಾಲ ತೀವ್ರ ವೇಗದಲ್ಲಿ ಬದಲಾಗುತ್ತಿದೆ. "ಸ್ಥಾನಿಕ ವಂಶವೃಕ್ಷ"ವನ್ನು ಬರೆಯಲು ಕಾಲ ಹತ್ತಿರವಾಗಿದೆ. ಅದು ಸಮಾಜದ ತುರ್ತು ಅಗತ್ಯವೂ ಆಗಿದೆ. ಅಜ್ಜ-ಮುತ್ತಜ್ಜರಿಂದ ಹಿಡಿದು ಮೊಮ್ಮಕ್ಕಳು-ಮರಿಮಕ್ಕಳವರೆಗಿನ ಸಾಧ್ಯವಾದಷ್ಟೂ ಆಳ ವಿವರಣೆ/ಬರವಣಿಗೆ ಮಾಡುವ ಅಗತ್ಯ ಹೆಚ್ಚಾಗಿದೆ. ಇದೇ ಸ್ಥಾನಿಕ ಸಮಾಜವೇ ಒಂದು ಒಟ್ಟು ಸಮುದಾಯವಾಗಿ ಆ ಸಮುದಾಯದ ವಂಶವೃಕ್ಷ ಸಿದ್ಧಾವಾಗಬೇಕಾಗಿದೆ. ಇದು ಇಂದಿನ ಹಾಗೂ ಮುಂದಿನ ಸ್ಥಾನಿಕ ಜನಾಂಗಗಳಿಗೆ ಅತ್ಯುಪಯುಕ್ತ ಮಾರ್ಗದರ್ಶಿಯಾಗಲಿದೆ.

"ಸ್ಥಾನಿಕ ವೃಕ್ಷ" ಎಂಬ ಈ ಯೋಜನೆ ಒಂದು ನಿರಂತರ ಕಾರ್ಯಕ್ರಮ. ಒಮ್ಮೆ ಇದನ್ನು ಕೈಗೆತ್ತಿಕೊಂಡರೆ ಮಧ್ಯೆ ನಿಲ್ಲಿಸಲಾಗದು. ವಿಶ್ವದ ಮೂಲೆಮೂಲೆಗಳಿಂದ ಸ್ಥಾನಿಕ ಬಾಂಧವರಿಂದ ವಿವರಗಳನ್ನು ಸಂಗ್ರಹಿಸಿ ಕಂಪ್ಯೂಟರಿಗೆ ಉಣಿಸಿದ ನಂತರ ಮುಂದೆ ನಿರಂತರವಾಗಿ ಹೊಸ ವಿವರಗಳನ್ನು ಪೂರೈಸಿ ಇದನ್ನು ಸುಸ್ಥಿತಿಯಲ್ಲಿಡಬೇಕಾಗುತ್ತದೆ. ಈ ಯೋಜನೆಗೆ ಇಡೀ ಸ್ಥಾನಿಕ ಸಮುದಾಯೀ ಸದಸ್ಯರ ಸಮಗ್ರ ಪಾಲ್ಗೊಳ್ಳುವುವಿಕೆ, ಎಡೆ ಬಿಡದ ಪ್ರೋತ್ಸಾಹ, ಅಗತ್ಯವಾಗಿದೆ. ಇಂದಿನ ಕಂಪ್ಯೂಟರ್ ಕ್ರಾಂತಿಯು ಈ ಸಾಹಸೋದ್ಯಮಕ್ಕೆ ಬೆಳ್ಳಿಗೆರೆಯಾಗಿದೆ ಮತ್ತು ಅದನ್ನು ಕೈಗೆತ್ತಿಕೊಳ್ಳಲು ವರಪ್ರಸಾದವಾಗಿದೆ. ಈ ಕಥೆ ಎಂದೆಂದೂ ಮುಂದುವರೆಯುತ್ತಾ ಇರುತ್ತದೆ.

ಬೆಂಗಳೂರು ಮತ್ತು ಇತರೆಡೆಗಳಲ್ಲಿರುವ ಸಮಾನ ಮನಸ್ಕ ಸ್ಥಾನಿಕ ಬಾಂಧವರು ಈ ಯೋಜನೆಗೆ ಶುಭಾರಂಭ ನೀಡಲು ಉತ್ಸುಕರಾಗಿದ್ದು ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ಸ್ವಾಮಿಯ ಅನುಗ್ರದೊಂದಿಗೆ "ಸ್ಥಾನಿಕ ವೃಕ್ಷ"ದ ಬೆಳೆವಣಿಗೆಗಾಗಿ ಬೀಜವನ್ನು ಬಿತ್ತುವ ಹವಣಿಕೆಯಲ್ಲಿದ್ದಾರೆ.

**ಸ್ಥಾನಿಕ ಸಮಾಜದ ಪ್ರತಿಯೊಬ್ಬರೂ ಅವರವರ ಪೂರ್ವಜರ ಹಾಗೂ ಮುಂದಿನ ಪೀಳಿಗೆಯ ಪರಸ್ಪರ ಸಂಬಂಧಿ ವಿವರಗಳನ್ನು ಸಂಗ್ರಹಿಸಿ ಈ ಬೃಹತ್ ಯೋಜನೆಯಲ್ಲಿ ಕೈ ಜೋಡಿಸಿ ಅದರ ಯಶಸ್ಸಿಗೆ ಸಹಕರಿಸಬೇಕಾಗಿ ಕೇಳಿಕೊಳ್ಳುತ್ತೇವೆ.**

ಆರಂಭಿಕವಾಗಿ, ಕನಿಷ್ಠ ವಿವರಗಳನ್ನು ಅಂದರೆ ಹೆಸರು/ಅಡ್ಡಹೆಸರು (ಇದ್ದಲ್ಲಿ) ಲಿಂಗ, ಜನ್ಮ ದಿನವಿವರ (ತಾ/ತಿಂಗಳು/ವರ್ಷ) ವೈವಾಹಿಕ ವಿವರ (ವಿವಾಹಿತ/ಅವಿವಾಹಿತ), ಕುಟುಂಬದ ಹೆಸರು, ಸ್ಥಳ, ಬಂಧುಗಳ ವಿವರಗಳನ್ನು ಸಂಗ್ರಹಿಸಿಟ್ಟು ಮುಂಬರುವ ದಿನಗಳಲ್ಲಿ ಭಾವೀ ಪೀಳಿಗೆಯ ವಿವರಗಳನ್ನು ಸೇರಿಸಿಕೊಳ್ಳುವ ಉದ್ದೇಶವಿರಿಸಿಕೊಳ್ಳಲಾಗಿದೆ.

ಮೊದಲ ಹಂತದಲ್ಲಿ ದೇಶದ ಬೇರೆ ಬೇರೆ ಊರುಗಳಲ್ಲಿ ವಾಸಿಸುತ್ತಿರುವ ಸಮಾಜ ಬಾಂಧವರನ್ನೊಳಗೊಂಡ ಸುಮಾರು ೫೦ ಜನ ಪ್ರತಿನಿಧಿಗಳಿರುವ ಒಂದು ಕಾರ್ಯಕಾರಿ ಸಮಿತಿಯನ್ನು ರಚಿಸಲು ಹಾಗೂ ಬೇರೆ ಬೇರೆ ಸ್ಥಳಗಳಲ್ಲಿರುವ ಸಮಾಜ ಬಾಂಧವರ ವಿವರಗಳನ್ನು ಸಂಗ್ರಹಿಸಲು ಯೋಜಿಸಲಾಗಿದೆ. ಪ್ರತಿನಿಧಿಗಳ ಸಂಖ್ಯೆಯನ್ನು ಅಗತ್ಯಕ್ಕೆ ತಕ್ಕಂತೆ ಹೆಚ್ಚಿಸಬಹುದಾಗಿದೆ. ಬೆಂಗಳೂರು, ಮುಂಬಯಿ, ದೆಹಲಿ, ಚೆನ್ನೈ, ಸತಾರ (ಮಹಾರಾಷ್ಟ್ರ), ಮಂಗಳೂರು, ಉಡುಪಿ, ಪುತ್ತೂರು, ಮೈಸೂರು, ಕುಂದಾಪುರ, ಬೈಂದೂರು, ಕಾರ್ಕಳ, ಪಡುಬಿದ್ರಿ, ಬೆಳ್ತಂಗಡಿ, ಶಿವಮೊಗ್ಗ, ತೀರ್ಥಹಳ್ಳಿ, ಬೆಂಗಳೂರು ಗ್ರಾಮಾಂತರ ಇತ್ಯಾದಿ ಕಡೆಗಳಿಂದ ಪ್ರಾತಿನಿಧ್ಯದ ಅಗತ್ಯವಿದೆ.

ಕಾಲಕ್ರಮೇಣ, ಸಂದರ್ಭಾನುಸಾರವಾಗಿ ಒಂದು "ವಿಶ್ವಸ್ಥ ಸಮಿತಿ" (Trust) ಯನ್ನು ಆರಂಭಿಸಲು ಹಾಗೂ "ಸ್ಥಾನಿಕ ವೃಕ್ಷ"ದ ಕೆಲಸವನ್ನು ನಿರಂತರವಾಗಿ ಟ್ರಸ್ಟಿನ ಮೂಲಕ ಮುನ್ನಡೆಸಲು ಕಾರ್ಯಕಾರಿ ಸಮಿತಿಯು ನಿರ್ಣಯಿಸುವ ಸಾಧ್ಯತೆಯಿದೆ.

ಈ ಯೋಜನೆಯ ಸ್ಪಷ್ಟ ರೂಪುರೇಷೆ ನಿರ್ಮಿಸಲು ಸಹಕರಿಸಿ : ದೇಶದ ನಾನಾ ಕಡೆ ಪಸರಿಸಿರುವ ನಮ್ಮ ಸಮಾಜದ ಆದಷ್ಟು ಹೆಚ್ಚು ಬಂಧು ಬಾಂಧವರನ್ನು ಈ ಯೋಜನೆಯಲ್ಲಿ ತೊಡಗಿಸುವುದು ನಮ್ಮ ಉದ್ದೇಶವಾಗಿದೆ. ನೀವೂ ಕೈಜೋಡಿಸಿ. ನಿಮ್ಮ ಸಲಹೆಗಳನ್ನು ನೀಡಿ.

ಸೂಕ್ತ ಸಾಫ್ಟ್‌ವೇರ್ (Computer Software) ಗುರುತಿಸಲು ತಂತ್ರಜ್ಞರು ಸಹಕರಿಸಿ:ಈ ಯೋಜನೆಯ ಯಶಸ್ಸಿಗಾಗಿ ಸದಸ್ಯರ ಸ್ವಯಂಪ್ರೇರಿತ ಪಾಲ್ಗೊಳ್ಳುವಿಕೆಯ ಅಗತ್ಯವಿದೆ. ಇದು ಯಾರೊಬ್ಬರ ಕಾರ್ಯವೂ ಅಲ್ಲ. ಇದು ಒಟ್ಟು ಸಮಾಜಕ್ಕೆ ಉಪಯೋಗವಾಗಬಲ್ಲ ಯೋಜನೆ. ಇದರ ಯಶಸ್ಸಿಗಾಗಿ ಸೂಕ್ತ ಕಂಪ್ಯೂಟರ್ ಸಾಫ್ಟ್‌ವೇರನ್ನು ಗುರುತಿಸಲು ಈ ವಿಭಾಗದಲ್ಲಿ ನುರಿತ ನಮ್ಮ ಯುವಜನಾಂಗದ (Software Engineer) ಸಲಹೆಗಳನ್ನು ಉಚಿತ ರೂಪದಲ್ಲಿ ಸ್ವಾಗತಿಸುತ್ತೇವೆ.

**ಸ್ಥಾನಿಕ ಸಮಾಜ ಬಾಂಧವರ 'ಮಿಂಚಂಚೆ (Email ID): ಸಂಖ್ಯೆ, ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆಯನ್ನು ಸಂಗ್ರಹಿಸಿ ನಮಗೆ ಕಳುಹಿಸಿದರೆ ಅದರಿಂದ ದೊಡ್ಡ ಸಹಾಯವಾಗುತ್ತದೆ.**

ಸಮಸ್ತ ಸ್ಥಾನಿಕ ಸಮಾಜವನ್ನು ಒಂದು ಸೂರಿನಡಿ ತರುವ ಅವಕಾಶ : ಸಮಾಜದ ಹಿತದೃಷ್ಟಿಯಿಂದ ಎಲ್ಲಾ ಸ್ಥಾನಿಕ ಸಮಾಜ ಬಾಂಧವರು ಒಗ್ಗಟ್ಟಾಗಿ ವೃಕ್ಷದ ಅಡಿಯಲ್ಲಿ ಸೇರೋಣ.

ಇದು ಆರಂಭಮಾತ್ರ : ನಮ್ಮ ಸಮಸ್ತ ಸ್ಥಾನಿಕ ಸಮಾಜವನ್ನು "ಸ್ಥಾನಿಕ ವೃಕ್ಷ" ವೆಂಬ ಒಂದೇ ಸೂರಿನಡಿ ತರುವ ಈ ಮಹತ್ಕಾರ್ಯದಲ್ಲಿ ನಿಮ್ಮ ಅಳಿಲು ಸೇವೆಯ ಸಹಕಾರ ನೀಡಿ. ಸಮರ್ಪಣಾಭಾವದಿಂದ ಕೆಲಸ ಮಾಡಬಲ್ಲ ಇಂದು ಸಮರ್ಥ ಕಾರ್ಯಕಾರೀ ಸಮಿತಿಯನ್ನು/ವಿಶ್ವಸ್ಥಸಮಿತಿ (Trust) ಯನ್ನು ರಚಿಸುವ ನಿಟ್ಟಿನಲ್ಲಿ ನಿಮ್ಮ ಅಮೂಲ್ಯ ಉಪಯುಕ್ತ ಸಲಹೆಗಳನ್ನು, ಅಭಿಪ್ರಾಯಗಳನ್ನು, ನಿಮ್ಮ ಮತ್ತು ನಿಮ್ಮ ಬಂಧುಗಳ E-mail Id ವಿವರಗಳನ್ನು ದಯವಿಟ್ಟು ಈ ಕೆಳಗಿನ ವಿಳಾಸಕ್ಕೆ ಕಳುಹಿಸಬೇಕೆಂದು ವಿನಂತಿಸುತ್ತೇವೆ.

**ಶಂಕರನಾರಾಯಣ ರಾವ್ ಕರ್ವಾಲು.**

**Flat. No d-301, d-Block, ETA Garden Apartments, Near Binny Mills, Magadi Road, Bangalore-560023**

**E-mail: sthanikavraksha @ gmail.com Mobile : 9449958151.**

**ಸಮಾಜ ಬಾಂಧವರ ಸಂಪೂರ್ಣ ಸ್ಪಂದನ ಹಾಗೂ ಸಹಕಾರ ಈ ಬೃಹತ್ ಕಾರ್ಯಕ್ರಮಕ್ಕೆ ನೆರವಾಗಲಿ ಎಂದು ಶ್ರೀಶಾರದಾ ಹಾರೈಕೆ** -ಸಂಪಾದಕ ಮಂಡಳಿ

**ಉಡುಪಿ–ಮಂಗಳೂರಿನ ಸಮಾಜ ಬಾಂಧವರಿಂದ ಮುಂಬೈ ಪ್ರವಾಸ**

■...3ನೇ ಪುಟದಿಂದ




ಪ್ರಯಾಣಿಕರಾಗಿದ್ದ ಮಂಗಳೂರಿನ "ಲಕುಮಿ" ನಾಟಕ ತಂಡದ ಅರವಿಂದ್ ಬೋಳಾರ್ ಮತ್ತು ಸಹ ಕಲಾವಿದರು ನಮ್ಮ ಪಕ್ಕದ ಬೋಗಿಯಲ್ಲಿ ಪ್ರಯಾಣಿಸುತ್ತಿದ್ದು, ಅವರೂ ನಮ್ಮ ಊಟವನ್ನು ಸ್ವೀಕರಿಸಿದರು. ಹಾಗೂ ನಮಗೆ ಧನ್ಯವಾದ ಹೇಳಿದರು. ಅಷ್ಟರಲ್ಲಿ ಗಂಟೆ 11 ಆಗಿತ್ತು. ಎಲ್ಲರೂ ತಮ್ಮ ತಮ್ಮ ಆಯಕಟ್ಟಿನ ಸ್ಥಳ ಹುಡುಕಿ ನಿದ್ದೆ ಹೋದರೆ; ಗಸ್ತು ಸುತ್ತುವ ನಮ್ಮ ಪಾಳಯದವರು ತಮ್ಮ ಪಾಳಿಯಲ್ಲಿ ಕರ್ತವ್ಯ ನಿರತರಾಗಿದ್ದರು.

### 18ರ ಬೆಳಿಗ್ಗೆ

18–11–2014ರ ಬೆಳಿಗ್ಗೆ ಸರಿ ಸುಮಾರು 5.30ಕ್ಕೆ ರೈಲು ಅಂಕೋಲಾ ತಲುಪಿದಾಗ ಎಲ್ಲರೂ ಒಬ್ಬರನ್ನೊಬ್ಬರು ಎಚ್ಚರಿಸುತ್ತಾ ಮುಖ ಮಾರ್ಜನ ಮಾಡಿ ಬೆಳಗಿನ "ಚಾಯ್ ಚಾಯೆ" ಎನ್ನುತ್ತ ಬಂದ ಚಾಯ್‌ವಾಲಾನಿಂದ ಚಹಾ ಪಡೆದು ಮುಂದಿನ ಪ್ರಯಾಣದ ನಿರೀಕ್ಷೆಯಲ್ಲಿ ತೊಡಗಿದರು. ಹಾಗೆಯೇ 5.40ಕ್ಕೆ ಬರಬೇಕಿದ್ದ ರೈಲು 8.45ಕ್ಕೆ ಉಡುಪಿಗೆ ತಲುಪಿತು. ಕೆಲವರು ಅವರವರ ಅನುಕೂಲಕ್ಕೆ ತಕ್ಕಂತೆ ಕುಂದಾಪುರ, ಬಾರಕೂರುಗಳಲ್ಲಿ ಇಳಿದರೆ ಉಡುಪಿ–ಪಡುಬಿದ್ರೆಯ ಸಮಾಜ ಬಾಂಧವರು ಉಡುಪಿಯಲ್ಲಿ ಇಳಿದರು.

ಮಂಗಳೂರಿನ ಬಂಧುಗಳು ಮಂಗಳೂರಿಗೆ ಬೀಳ್ಕೊಂಡರು. ಹೀಗೆ ನಮ್ಮ ಮುಂಬೈ ಪ್ರವಾಸವು, ಸುಗಮವಾಗಿ, ಸುಖಕರವಾಗಿ, ಉತ್ತಮ ಮನರಂಜನೆಯೊಂದಿಗೆ ನಿರ್ವಿಘ್ನವಾಗಿ ಎಲ್ಲ ಸಹ ಪ್ರಯಾಣಿಕ ಬಂಧುಗಳ ಮೆಚ್ಚುಗೆಯ ಮಾತುಗಳೊಂದಿಗೆ ಮುಕ್ತಾಯ ಕಂಡಿತು.

### ಸಮಾರೋಪ

ನಮ್ಮ ಪ್ರಯಾಣದಲ್ಲಿದ್ದ ಎಲ್ಲಾ ಸಮಾಜ ಬಾಂಧವರ ಪೂರ್ಣ ಸಹಕಾರ ಹಾಗೂ ಮುಂಬೈ ಸಂಘದ ಪದಾಧಿಕಾರಿಗಳ ಸೌಜನ್ಯ ಪೂರಿತವಾದ ಆತಿಥ್ಯ, ಉಪಚಾರ, ವ್ಯವಸ್ಥೆ ಮುಂಬೈ ಬಂಧುಗಳಿಂದ ನಮ್ಮ ಯೋಗ ಕ್ಷೇಮ ವಿಚಾರಣೆ ಹಾಗೂ ನಮ್ಮ ಕಲಾ ಪ್ರದರ್ಶನಗಳ ವೀಕ್ಷಣೆ ಮತ್ತು ಪ್ರೋತ್ಸಾಹದ ಮಾತುಗಳು ಇವೆಲ್ಲವನ್ನೂ ನಾವು ಮತ್ತೆ ಮತ್ತೆ ನೆನಪಿಸಿಕೊಂಡು ಅವರೆಲ್ಲರಿಗೆ ಅನಂತ ಕೃತಜ್ಞತೆ ಸಲ್ಲಿಸಬೇಕಾಗಿದೆ.

**ಶ್ರೀ ಸುಬ್ರಹ್ಮಣ್ಯ ಸೇವಾ ಸಂಘ, ಮುಂಬೈ : 75ರ ಸಂಭ್ರಮ,**

■...1ನೇ ಪುಟದಿಂದ

**ಶ್ರೀಮತಿ ಸಬಿತ ಎಸ್.ರಾವ್ ಬೆಂಗಳೂರು, ಶ್ರೀ ಕರುಣ್‌ರಾವ್ ಬೆಳ್ಳೆ ಇವರ ಉಪಸ್ಥಿತಿಯಲ್ಲಿ ಸಮಾಜದ ವಿವಿಧ ಆಯಾಮಗಳ ಸಮಸ್ಯೆಗಳ ಬಗ್ಗೆ ಚರ್ಚಾಗೋಷ್ಠಿಯು ನೆರವೇರಿತು. ಈ ಚರ್ಚೆಯಲ್ಲಿ ಮುಂಬೈ ಹಾಗೂ ಊರಿನಿಂದ ಆಗಮಿಸಿರುವ ಸಮಾಜ ಬಾಂಧವರು ಉತ್ಸಾಹದಿಂದ ಪಾಲ್ಗೊಂಡರು.**

**ಮಧ್ಯಾಹ್ನದ ಭೋಜನಾ ನಂತರ ಸಂಗೀತ ಕಾರ್ಯಕ್ರಮವು ನೆರವೇರಿತು. ಆ ಮೇಲೆ ನಡೆದ ಸಮಾರೋಪ ಸಮಾರಂಭದಲ್ಲಿ ಶ್ರೀ ಪಂಜ ಪ್ರದೀಪ್ ಕುಮಾರ್‌ರಾವ್‌ರವರ ಅಧ್ಯಕ್ಷತೆಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಮಾಜದ ಹಲವು ಗಣ್ಯರನ್ನು ಸನ್ಮಾನಿಸಲಾಯಿತು. ಹಾಗೆಯೇ ನಮ್ಮ ಸಮಾಜದ ವಿವಿಧ ಸಂಘಟನೆಗಳ ಪದಾಧಿಕಾರಿಗಳನ್ನು ಗುರುತಿಸಿ ಗೌರವಿಸಲಾಯಿತು.**

**ಸಾಂಸ್ಕೃತಿಕ ಕಾರ್ಯಕ್ರವಾಗಿ ಉಡುಪಿ ದ.ಕ. ಜಿಲ್ಲೆಗಳ ಉಭಯ ತಿಟ್ಟುಗಳ ಯಕ್ಷಗಾನ ಬಯಲಾಟವು ನೆರವೇರಿತು.**




## ಮೂಡುಬಿದಿರೆ ಶ್ರೀ ಚಂದ್ರಶೇಖರದೇವಾಲಯದಲ್ಲಿ ಶಿವ ಪಂಚಾಕ್ಷರಿಕೋಟಿಜಪಯಜ್ಞ ಮತ್ತು ಶ್ರೀ ಮೃತ್ಯುಂಜಯ ಶಾಂತಿ ಹೋಮ



ಸ್ಥಳೀಯ ದೊಡ್ಡಮನೆ ಶ್ರೀ ಚಂದ್ರ ಶೇಖರದೇವಸ್ಥಾನದ ಭಜಕರ ಶ್ರೇಯೋಭಿವೃದ್ಧಿಗಾಗಿ ಶೃಂಗೇರಿ ಪೀಠಾಧೀಶ್ವರ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸನ್ನಿಧಾನಂಗಳವರ ಪರಮಾನುಗ್ರಹದಿಂದ ನವೆಂಬರ್ 29 ಹಾಗೂ 30 ರಂದು ವಿವಿಧ ಕಾರ್ಯಕ್ರಮಗಳು ವಿಜೃಂಭಣೆಯಿಂದ ಜರುಗಿತು.

ದಿನಾಂಕ 29 ರಂದು ಮೂಡುಬಿದಿರೆ ಪೇಟೆಯ ಶ್ರೀ ಆಂಜನೇಯ ದೇವಸ್ಥಾನದ ಪ್ರಸಾದದೊಂದಿಗೆ ಹೊರಟ ಕಲಶ ಸಹಿತ ಮೆರವಣಿಗೆಯಲ್ಲಿ ಹಸಿರುವಾಣಿ ಹೊರೆಕಾಣಿಕೆ ಹಾಗೂ ಮೂಡುಬಿದಿರೆ ಶ್ರೀಮತಿ ಸುಜಾತಾ ಮನೋಹರ ಕುಟುಂಬಸ್ಥರು ನೀಡಿದ ರಜತ ಪ್ರಭಾವಳಿ, ಮುಂಬೈ ಸ್ಥಿತ ಶ್ರೀರಂಗಪಟ್ಟಣದ ಶ್ರೀಮತಿ ಶಂಕರಿ ಮೋಹನ ರಾವ್ ಮತ್ತು ಮಕ್ಕಳು ನೀಡಿದ ಚಿನ್ನ ಲೇಪಿತ ರಜತ ಪುಷ್ಪಹಾರ, ನಾಗ ಪ್ರತಿಮೆ ಹಾಗೂ ಶ್ರೀ ಸೀತಾರಾಮ ರಾವ್‌ರವರು ಒದಗಿಸಿದ ಪುಸ್ತಕದಲ್ಲಿ ಲಿಖಿತ ಪಂಚಾಕ್ಷರಿ ಮಂತ್ರದ ಪುಸ್ತಕಗಳನ್ನು ಭವ್ಯ ಮೆರವಣಿಗೆಯಲ್ಲಿ ದೇವಸ್ಥಾನಕ್ಕೆ ಹೊತ್ತು ತರಲಾಯಿತು.

ವರದಿ : **ರಾಯೀ ರಾಜಕುಮಾರ್ ಮೂಡುಬಿದ್ರಿ**

## ಅಪೂರ್ವ ಕ್ಷಣ

ಮುಂಬೈ ಪ್ರಯಾಣದಿಂದ ಮರಳಿ ಬರುವಾಗ ನಮ್ಮ ರೈಲಿನ ಬೋಗಿಯ ಪಕ್ಕದಲ್ಲಿದ್ದ ಇನ್ನೊಂದು ಬೋಗಿಯಲ್ಲಿ ಮಂಗಳೂರಿನ ಖ್ಯಾತ ‘ಲಕುಮಿ’ ನಾಟಕ ತಂಡದ ಸದಸ್ಯರು ತಮ್ಮ ಮುಂಬೈ ಪ್ರವಾಸವನ್ನು ಮುಗಿಸಿ ಹಿಂದಿರುಗುತ್ತಿದ್ದರು. ನಮ್ಮ ಕಲಾವಿದರಾದ ಶ್ರೀ ದೇವಾನಂದ ಭಟ್, ಶ್ರೀ ನಾಗರಾಜ್ ವರ್ಕಾಡಿ, ಶ್ರೀ ಶಿವಾನಂದ ಕೋಟ ಮೊದಲಾದವರು ಅವರನ್ನು ಗುರುತಿಸಿ ಮಾತನಾಡಿಸಿದಾಗ ಅವರೂ ನಮ್ಮನ್ನು ಗುರುತಿಸಿ ಗೌರವಿಸಿದರು.

ಅದರಲ್ಲಿಯೂ ನಾಟಕ ತಂಡದಲ್ಲಿದ್ದ ಶ್ರೀ ಅರವಿಂದ ಬೋಳಾರ್ ಹಾಗೂ ನಮ್ಮ ಜೊತೆಯಲ್ಲಿ ಪ್ರಯಾಣಿಸುತ್ತಿದ್ದ ನಮ್ಮ ಸಂಘದ ಕಾರ್ಯದರ್ಶಿ ಶ್ರೀ ಅರವಿಂದ ಕುಮಾರ್ ಇಬ್ಬರೂ ಜೊತೆಯಾಗಿ ಕುಳಿತು ಉಭಯ ಕುಶಲೋಪರಿ ಮಾತನಾಡುತ್ತಿದ್ದಾಗ ನಮ್ಮ ಹುಡುಗರು ಮಾತ್ರವಲ್ಲದೇ ರೈಲಿನಲ್ಲಿದ್ದ ಇತರ ಸಹಪ್ರಯಾಣಿಕರು ತಮ್ಮ ಕೆಮೆರಾ ಹಾಗೂ ಮೊಬೈಲ್‌ಗಳಿಂದ ಈ ಅಪೂರ್ವ ಜೋಡಿ ಫೋಟೋ ಕ್ಲಿಕ್ಕಿಸಿಕೊಂಡರು. ಶ್ರೀ ಅರವಿಂದ ಬೋಳಾರ್ ಕೆಲವು ತುಳು ಹಾಸ್ಯ ಚಟಾಕಿಗಳನ್ನು ಹಾರಿಸುತ್ತಾ ಹಲವು ಹೊತ್ತು ನಮ್ಮೊಂದಿಗೆ ಜೊತೆಯಾಗಿದ್ದರು.



# ವೈದ್ಯಕೀಯ ವೇದಿಕೆ–ಆರೋಗ್ಯ ಮಾಹಿತಿ

ಡಾ। ವೈ. ಸುದರ್ಶನ ರಾವ್



**ಪ್ರಶ್ನೆ: ಅಫಘಾತಗಳು ಮತ್ತು ಆರೋಗ್ಯ**

ಅನಿರೀಕ್ಷಿತವಾಗಿ ಘಟಿಸಿದ ಘಾತವನ್ನು ಅಫಘಾತವೆನ್ನುತ್ತೇವೆ. ಮನುಷ್ಯನ ಹತೋಟಿಗೆ ಮೀರಿ ಘಟಿಸುವಂತಾದ್ದು ಎಂಬ ರಿಯಾಯಿತಿಯೂ ಇದಕ್ಕಿದೆ. ಮನುಷ್ಯನ ಜೀವನದ ಗತಿಯನ್ನು ಕ್ಷಣಮಾತ್ರದಲ್ಲಿ ಬದಲಿಸಬಲ್ಲ ಅಫಘಾತಗಳು ನಿಜವಾಗಿಯೂ ನಮ್ಮ ಹತೋಟಿ ಮೀರಿ ಘಟಿಸುವಂತಾದ್ದೇ? ಇದನ್ನು ತಡೆಗಟ್ಟಲು ಎಷ್ಟರ ಮಟ್ಟಿಗೆ ಸಾಧ್ಯವಿದೆ? ಎಂಬ ನಿಟ್ಟಿನಲ್ಲಿ ವೈಜ್ಞಾನಿಕವಾದ ವಿಶ್ಲೇಷಣೆ ಇಲ್ಲಿದೆ.

ಬರಸಿಡಿಲಿನಂತೆ ಕ್ಷಣ ಮಾತ್ರದಲ್ಲಿ ಬಂದೆರಗುವ ಸಾವು ನೋವುಗಳು, ವೈದ್ಯರನ್ನೇ ದಂಗುಪಡಿಸುವ ವಿಚಿತ್ರವಾದ ಗಾಯಗಳು, ಕುಟುಂಬಿಕರ ದುಃಖ ಹಾಹಾಕಾರ, ಕ್ಷಣದಲ್ಲಿ ಬದಲಾಗುವ ಆರ್ಥಿಕ ಹಾಗೂ ಕೌಟುಂಬಿಕ ಪರಿಸ್ಥಿತಿ, ಜಾತಿ ಮತ ಲಿಂಗ ವಯಸ್ಸಿನ ಬೇಧವಿಲ್ಲದೇ ಎಲ್ಲರನ್ನೂ ಆಹುತಿ ತೆಗೆದುಕೊಳ್ಳಬಲ್ಲ ಶಕ್ತಿ ಇವೆಲ್ಲಾ ಅಫಘಾತದ ವಿಶೇಷತೆಗಳು. ಪ್ರಕೃತಿ ವಿಕೋಪಗಳಿಗೂ, ಭಯೋತ್ಪಾದಕರ ದಾಳಿಗಳಿಗೂ ಇದೇ ಲಕ್ಷಣಗಳಿರುವುದರಿಂದ ಅವುಗಳನ್ನು ಅಫಘಾತಗಳೊಂದಿಗೆ ಸೇರಿಸಿ ವಿವರಿಸುತ್ತೇನೆ. ಅಫಘಾತವು ಮನುಷ್ಯನಿಗೆ ಸಾವು ಸಂಭವಿಸುವ ಕಾರಣಗಳ ಪಟ್ಟಿಯಲ್ಲಿ ಮೂರನೇ ಸ್ಥಾನದಲ್ಲಿದೆ. ಈಗ ಶೇಕಡಾ ಹತ್ತರಷ್ಟು ಸಾವು ಅಫಘಾತಗಳಿಂದಲೇ ಸಂಭವಿಸುತ್ತಿದೆ. ಯುವಕರನ್ನು ಬಲಿತೆಗೆದುಕೊಳ್ಳುವುದರಲ್ಲಿ ಮೊದಲನೆಯ ಸ್ಥಾನದಲ್ಲಿದೆ. ಅಫಘಾತಗಳನ್ನು ತಡೆಗಟ್ಟುವುದರ ಪ್ರಾಮುಖ್ಯತೆಯನ್ನು ಈ ಅಂಶಗಳಿಂದಲೇ ಗ್ರಹಿಸಬಹುದು.

ಅಪಘಾತಗಳಲ್ಲಿ ಮೂರು ವಿಧ. ಮೊದಲನೆಯದು ರಸ್ತೆ ಅಫಘಾತಗಳು. ಎರಡನೆಯದ್ದು ಕೆಲಸದ ವಾತಾವರಣದಲ್ಲಿ ಆಗುವಂತಾದ್ದು. ಮೂರನೆಯದ್ದು ಮನೆಯಲ್ಲಿ ಆಗುವ ಅಫಘಾತಗಳು.

ಅಫಘಾತಗಳು ಯಾವುದೇ ತರಹದ್ದಿರಲಿ, ಸಂಭವಿಸಲು ಕಾರಣಗಳೇನು?

ಮೊದಲನೆಯದಾಗಿ ತಾನು ಮಾಡುತ್ತಿರುವ ಕೆಲಸದಲ್ಲಿ ಅನುಭವವಿಲ್ಲದಿರುವುದು. ಉದಾಹರಣೆಗೆ ವಾಹನ ಚಲಾಯಿಸಲು ತಿಳಿಯದವನು ವಾಹನ ಚಲಾಯಿಸುವುದು. ಎರಡನೆಯದಾಗಿ ತನ್ನ ಶಕ್ತಿ ಹಾಗೂ ಯುಕ್ತಿಗೆ ಮೀರಿದ ಕೆಲಸ ಮಾಡುವುದು. ಉದಾಹರಣೆಗೆ ಸಣ್ಣ ಪ್ರಾಯದ ಮಕ್ಕಳು ವಾಹನ ಚಲಾಯಿಸುವುದು. ಮೂರನೆಯದಾಗಿ ಅಮಲು ಪದಾರ್ಥ ಸೇವನೆ. ನಾಲ್ಕನೆಯದು ತಾನಿರುವ ಪರಿಸ್ಥಿತಿಯಲ್ಲಿ ಯಾವ ರೀತಿ ಅಫಘಾತವೊಂದು ಸಂಭವಿಸೀತು ಎಂಬ ಗೊಡವೆಯೆ ಇಲ್ಲದೆ ಮುಂಜಾಗ್ರತಾ ಕ್ರಮಗಳ ಬಗ್ಗೆ ನಿರ್ಲಕ್ಷ್ಯವಹಿಸುವುದು. ಐದನೆಯದಾಗಿ ಅಫಘಾತವನ್ನು ತಡೆಗಟ್ಟಬಹುದಾದ ಮೂಲಭೂತ ಸೌಕರ್ಯಗಳನ್ನು ಒದಗಿಸುವಲ್ಲಿ ಆಡಳಿತ (ಸರಕಾರ, ಉದ್ಯೋಗದಾತ ಹಾಗೂ ಸ್ವಯಂ ತಾನು)ದ ವೈಫಲ್ಯ ಅಥವಾ ನಿರ್ಲಕ್ಷ್ಯ.

ಅತಿಯಾದ ವೇಗದಿಂದ ವಾಹನ ಚಲಾಯಿಸುವುದು, ಅಮಲು ಪದಾರ್ಥ ಸೇವಿಸಿರುವುದು, ದೈಹಿಕ ಅಸಾಮರ್ಥ್ಯ, ರಸ್ತೆ ನಿಯಮಗಳ ಬಗ್ಗೆ ಅಜ್ಞಾನ ಹಾಗೂ ನಿರ್ಲಕ್ಷ್ಯ, ಅವೈಜ್ಞಾನಿಕವಾಗಿ ನಿರ್ಮಿತವಾದ ರಸ್ತೆಗಳು, ವಿಭಾಜಕಗಳು, ತಿರುವುಗಳು ಹಾಗೂ ಹೊಂಡಗಳು, ರಸ್ತೆಯಲ್ಲಿ ತಿರುಗುವ ಪಶು ಪ್ರಾಣಿಗಳು ಹಾಗೂ ವಾಹನದ ದೋಷಗಳು ರಸ್ತೆ ಅಫಘಾತಗಳಿಗೆ ಕಾರಣಗಳು.

ಎತ್ತರದಿಂದ ಬೀಳುವುದು, ಎತ್ತರದಿಂದ ವಸ್ತುಗಳು ಮೈಮೇಲೆ ಬೀಳುವುದು, ಯಂತ್ರದೊಳಗೆ ದೇಹದ ಭಾಗ ಸಿಕ್ಕಿಹಾಕಿಕೊಂಡು ಗಾಯವಾಗುವುದು, ಬೆಂಕಿ, ವಿದ್ಯುತ್ ಹಾಗೂ ನೀರಿನ ಅನಾಹುತಗಳು ಇವು ಕೆಲಸದ ಸಂದರ್ಭದಲ್ಲಿ ಆಗುವ ಅಫಘಾತಗಳು. ಮಾಡುತ್ತಿರುವ ಕೆಲಸದಲ್ಲಿ ಅನುಭವವಿಲ್ಲದಿರುವುದು, ಹಾಗೂ ತನ್ನ ಶಕ್ತಿ ಹಾಗೂ ಯುಕ್ತಿಗೆ ಮೀರಿದ ಕೆಲಸ ಕೈಗೆತ್ತಿಕೊಳ್ಳುವುದು, ಅಮಲು ಪದಾರ್ಥ ಸೇವಿಸಿರುವುದು ಹಾಗೂ ಮುಂಜಾಗ್ರತಾ ಕ್ರಮಗಳ ಬಗೆಗಿನ ನಿರ್ಲಕ್ಷ್ಯ ಇವಿಷ್ಟು ಕೆಲಸದ ವಾತಾವರಣದಲ್ಲಿ ಸಂಭವಿಸುವ ಅಫಘಾತಗಳಿಗೆ ಕಾರಣಗಳು.

ಮನೆಯಲ್ಲಿ ಸಂಭವಿಸುವ ಅಫಘಾತಗಳಿಗೆ ಹೆಚ್ಚಾಗಿ ಬಲಿಯಾಗುವವರು ಮಕ್ಕಳು ಹಾಗೂ ವೃದ್ಧರು. ಜಾರಿ ಬೀಳುವುದು, ಬೆಂಕಿ ಹಾಗೂ ಬಿಸಿಯಾದ ವಸ್ತುಗಳಿಂದ ಗಾಯವಾಗುವುದು, ವಿಷಪ್ರಾಶನ, ನೀರಿನಲ್ಲಿ ಮುಳುಗುವುದು, ಪ್ರಾಣಿಗಳಿಂದ (ನಾಯಿ, ಬೆಕ್ಕು, ಹಾವು, ಚೇಳು ಇತ್ಯಾದಿ) ಕಡಿತ, ಗಾಜು ಚೂರಿ ಮಂಚ ಇತ್ಯಾದಿ ವಸ್ತುಗಳು ಆಕಸ್ಮತ್ತಾಗಿ ತಾಗಿ ಗಾಯವಾಗುವುದು, ವಿದ್ಯುದಾಘಾತಗಳು ಈ ಅಫಘಾತಗಳಿಗೆ ಉದಾಹರಣೆಗಳು. ಆತ್ಮಹತ್ಯೆಯನ್ನು ಕೂಡಾ ಕೆಲವರು ಈ ಪಟ್ಟಿಗೆ ಸೇರಿಸುತ್ತಾರೆ. ಈಗ ತಾನೆ ನಡೆಯಲು ಕಲಿತಿರುವ ಮಗು ಮೇಜಿನ ಮೇಲಿಟ್ಟಿರುವ ಬಿಸಿ ಹಾಲನ್ನೋ ನೀರನ್ನೋ ಎಟುಕಿಸಲು ಹೋಗಿ ಮೈಮೇಲೆ ಸುರಿದುಕೊಳ್ಳುವುದು, ದೊಡ್ಡವರ ಮಾತ್ರೆಯನ್ನು ಮಕ್ಕಳು ಆಟಕ್ಕೆಂದು ತಿಂದು ಬಿಡುವುದು, ಯಾವುದೋ ಮಾತ್ರೆಯೆಂದು ಭಾವಿಸಿ ಇನ್ನೊಂದು ಮಾತ್ರೆಯನ್ನು ತಿನ್ನುವುದು, ಕುಡಿಯುವ ನೀರಿನ ಬಾಟಲಿಗಳಲ್ಲಿ ಶೇಖರಿಸಿಟ್ಟ ಕೀಟನಾಶಕ, ಫಿನಾಯಿಲನ್ನು ಕುಡಿಯುವುದು, ಬೆಳಕಿಲ್ಲದ ಕಡೆಯಲ್ಲಿ ತಡಕಾಡುತ್ತಾ ಹೋಗಿ ಜಾರಿ ಬೀಳುವುದು, ಇಲ್ಲವೇ ಹಾವು ಚೇಳಿನಿಂದ ಕಡಿಸಿಕೊಳ್ಳುವುದು ಹೀಗೆ ಮನೆಯಲ್ಲಿ ಸಂಭವಿಸಬಹುದಾದ ಅಫಘಾತಗಳ ಪಟ್ಟಿ ಬೆಳೆಯುತ್ತದೆ.

ರಸ್ತೆ ಅಫಘಾತವಿರಲಿ, ಅಥವಾ ಕೆಲಸದಲ್ಲಾಗುವದಿರಲಿ ಅಥವಾ ಮನೆಯಲ್ಲಾಗುವದಿರಲಿ, ಕೂಲಂಕುಷವಾಗಿ ಈ ಅಫಘಾತಗಳು ಸಂಭವಿಸುವ ನಮೂನೆಯನ್ನು ಗಮನಿಸಿದರೆ ಅದನ್ನು ತಡೆಗಟ್ಟಲು ನಿಜವಾಗಿಯೂ ಬೇಕಾದುದು ಸ್ವಲ್ಪ ವಿವೇಚನೆ ಹಾಗೂ ಸ್ವಲ್ಪ ಶಿಸ್ತು ಅಲ್ಲದೇ ಮತ್ತೇನಿಲ್ಲ.

**ಆರೋಗ್ಯ ಮಾಹಿತಿಯ ಬಗ್ಗೆ ಪ್ರಶ್ನೆಗಳನ್ನು ಎಸ್.ಎಮ್.ಎಸ್.ಮೂಲಕವೂ ತಿಳಿಸಬಹುದು. ಸಂಚಾರಿ ದೂರವಾಣಿ ನಂ. : 9845136322**

# ಸುರತ್ಕಲ್‌ನಲ್ಲಿ ವಾರ್ಷಿಕ ಮಹಾಸಭೆ



ತಾ.19-10-2014ರಂದು ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಸುರತ್ಕಲ್ ಇದರ ವಾರ್ಷಿಕ ಮಹಾಸಭೆಯು ಸುರತ್ಕಲ್ ಗೋವಿಂದದಾಸ್ ಕಾಲೇಜಿನ ಎದುರಿನ 'ಮಾನಸ' ಮನೆಯ ಆವರಣದಲ್ಲಿ ನಡೆಯಿತು. ಬೆಳಿಗ್ಗೆ ನೋಂದಣಿ, ಉಪಾಹಾರದ ಬಳಿಕ ಸಮಾಜ ಬಾಂಧವರಿಗೆ ವಯಸ್ಸಿಗನುಗುಣವಾಗಿ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ನಂತರ ಸಂಘದ ಮಹಾಸಭೆಯು ನಡೆಯಿತು. ಪ್ರಾರ್ಥನೆಯ ಬಳಿಕ ಅಧ್ಯಕ್ಷರಾದ ಶ್ರೀ ಕೆ. ಮಾಧವ ರಾವ್ ಇವರು ಎಲ್ಲರನ್ನೂ ಸ್ವಾಗತಿಸಿದರು. ಕಾರ್ಯದರ್ಶಿಯವರಾದ ಶ್ರೀ ಸುಕುಮಾರ್ ಎಮ್. ಇವರು ವಾರ್ಷಿಕ ವರದಿಯನ್ನು ವಾಚಿಸಿ ಕಾರ್ಯಕ್ರಮವನ್ನು ನಿರೂಪಿಸಿದರು. ಕೋಶಾಧಿಕಾರಿಗಳಾದ ಶ್ರೀ ಸಿ. ರಾಘವೇಂದ್ರ ರಾವ್, ಸಂಘದ ಆಯವ್ಯಯ ಪತ್ರ, ಅಂದಾಜು ಆಯವ್ಯಯ ಪತ್ರವನ್ನು ವಾಚಿಸಿದರು. ಮಹಾಸಭೆಯು ಇದನ್ನು ಅಂಗೀಕರಿಸಿತು. ಸ್ಪರ್ಧೆಗಳ ನಿರ್ವಹಣೆ ಹಾಗೂ ಪ್ರಾಯೋಜಕತ್ವವನ್ನು ಶ್ರೀ ಪಾಲಚಂದ್ರ ಶರ್ಮ ಹಾಗೂ ಸುಧಾಮಣಿ ದಂಪತಿಗಳು ವಹಿಸಿದ್ದರು. ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷ, ಉಪಾಧ್ಯಕ್ಷರೊಂದಿಗೆ ಶ್ರೀ ವೈ.ವಿ.ರತ್ನಾಕರ ರಾವ್, ಮಂಗಳೂರು ಸಂಘದ ಕಾರ್ಯದರ್ಶಿಗಳಾದ ಶ್ರೀ ಕರುಣ್‌ರಾವ್ ಬೆಳ್ಳೆ, ಪಡುಬಿದ್ರಿ ಸಂಘದ ಎಮ್.ಕೆ. ಮೋಹನ್ ರಾವ್ ಮತ್ತಿತರ ಗಣ್ಯರು ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ಯುವ ವೇದಿಕೆ ಹಾಗೂ ಮಹಿಳಾ ವೇದಿಕೆಯನ್ನು ಉದ್ಘಾಟಿಸಲಾಯಿತು. ಕಾರ್ಯಕ್ರಮದ ಕೊನೆಗೆ ಸಂಘದ ಸದಸ್ಯರಿಂದ ಹಾಗೂ ಮಕ್ಕಳಿಂದ ವಿವಿಧ ಮನೋರಂಜನಾ ಕಾರ್ಯಕ್ರಮ ಜರಗಿತು. ಭೋಜನದ ಬಳಿಕ ಕಾರ್ಯ ಚುಟುವಟಿಕೆಯು ಮುಕ್ತಾಯವಾಯಿತು.

# ಮಲೇಷಿಯಾ ಸಮ್ಮೇಳನಕ್ಕೆ ಡಾ। ಪ್ರಶಾಂತ್ ಎ.ಎಸ್.



ಹುಬ್ಬಳ್ಳಿಯ ಆಯುರ್ವೇದ ಮಹಾವಿದ್ಯಾಲಯದ ಸ್ನಾತಕೋತ್ತರ ವಿಭಾಗದ ಪ್ರಾಧ್ಯಾಪಕರಾದ ಡಾ॥ ಪ್ರಶಾಂತ ಎ.ಎಸ್. ಅವರು ಮಲೇಶಿಯಾದಲ್ಲಿ ನಡೆಯುವ ಔಷಧ ಸಸ್ಯಗಳ ಅಂತರಾಷ್ಟ್ರೀಯ ಸಮ್ಮೇಳನಕ್ಕೆ ಸಂಪನ್ಮೂಲ ವ್ಯಕ್ತಿಗಳಾಗಿ ಆಹ್ವಾನಿತರಾಗಿದ್ದಾರೆ. ನವೆಂಬರ್ ತಿಂಗಳು 18 ರಿಂದ 22ರ ವರೆಗೆ ನಡೆದ ಈ ಔಷಧ ಸಸ್ಯಗಳ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಮೂತ್ರಕೋಶಕ್ಕೆ ಸಂಬಂಧಿಸಿದ ರೋಗಗಳಲ್ಲಿ ಔಷಧ ಸಸ್ಯಗಳ ಬಳಕೆ ಮತ್ತು ಶ್ವಾಸಕೋಶಕ್ಕೆ ಸಂಬಂಧಿಸಿದ ರೋಗಕ್ಕೆ ಔಷಧ ಸಸ್ಯಗಳ ಕುರಿತಾಗಿ ಎರಡು ಪ್ರತೇಕ ವಿಷಯಗಳಲ್ಲಿ ಉಪನ್ಯಾಸ ನೀಡಲು ಆಹ್ವಾನಿತರಾಗಿದ್ದರು.

ಅಂತರಾಷ್ಟ್ರೀಯ ಸಮ್ಮೇಳನವು ಮಲೇಶಿಯಾ ದೇಶದ ಸರವಾಕ ನ ಕುಚಿಂಗ್ ಎಂಬಲ್ಲಿ ಆಯೋಜಿಸಲ್ಪಟ್ಟಿದೆ. ಅಯುರ್ವೇದ ಮಹಾವಿದ್ಯಾಲಯದ ಪ್ರಾಚಾರ್ಯರು, ಶಿಕ್ಷಕ–ಶಿಕ್ಷಕೇತರ ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿಗಳು ಡಾ॥ ಪ್ರಶಾಂತ ಎ.ಎಸ್. ಇವರಿಗೆ ಶುಭ ಹಾರೈಸಿದ್ದಾರೆ.

ಖ್ಯಾತ ಯಕ್ಷಗಾನ ಕಲಾವಿದರೂ, ಯಕ್ಷಗಾನ ಪ್ರಸಾಧನ ತಯಾರಕರೂ ಆಗಿರುವ ಶ್ರೀ ಅಡೂರು ಶ್ರೀಧರರಾವ್ ಮತ್ತು ಶ್ರೀಮತಿ ಶಾಂಭವಿ ದಂಪತಿಗಳ ತೃತೀಯ ಪುತ್ರರಾದ ಡಾ। ಪ್ರಶಾಂತ್ ಎ.ಎಸ್. ಅವರು ಪತ್ನಿ ಡಾ। ಸ್ವಾತಿ ಪ್ರಶಾಂತ್ ಹಾಗೂ ಓರ್ವ ಪುತ್ರಿಯೊಂದಿಗೆ ಪ್ರಸ್ತುತ ಹುಬ್ಬಳ್ಳಿಯಲ್ಲಿ ವಾಸ್ತವ್ಯದಲ್ಲಿದ್ದಾರೆ. ಡಾ। ಪ್ರಶಾಂತ್ ಎ.ಎಸ್.ರವರ ಸಾಧನೆಗಾಗಿ ಶ್ರೀಶಾರದಾ ಅಭಿನಂದನೆಗಳು.

# ಪುಣ್ಯಸ್ಮರಣೆ



**ಜನನ : 04-02-1946** **ನಿಧನ : 20-12-2007**

**ಶ್ರೀಮತಿ ಕುಸುಮ ಗೋವಿಂದ ರಾವ್, ಕರಾಡ**

**(ಪುಣ್ಯತಿಥಿ : 11-01-2015)**

ನೀವು ನಮ್ಮನ್ನಗಲಿ 7 ವರ್ಷ ಕಳೆದರೂ ನಿಮ್ಮ ನೆನಪು ಹಸಿರಾಗಿದ್ದು ನಿಮ್ಮ ಆದರ್ಶ, ಸದ್ಗುಣ ಸಂಪನ್ನತೆಯೇ ನಮಗೆ ದಾರಿದೀಪ. ನಿಮ್ಮನ್ನು ನಿರಂತರವೂ ಸ್ಮರಿಸುತ್ತಿರುವ,

**ವೈ. ಗೋವಿಂದ ರಾವ್ (ಪತಿ); ಮಕ್ಕಳು–ವೈ.ನಾಗರಾಜ ರಾವ್ ಮತ್ತು ಶ್ರೀಮತಿ ಸುಮಂಗಲ ಎನ್.ರಾವ್; ವೈ.ಕೃಷ್ಣರಾಜ ರಾವ್ ಮತ್ತು ಶ್ರೀಮತಿ ವೈ. ಗಾಯತ್ರಿ ಕೆ. ರಾವ್; ಶ್ರೀಮತಿ ಹೇಮಲತಾ ರಾಜೇಂದ್ರ ಕುಮಾರ್; ರಾಜೇಂದ್ರ ಗೋಪಾಲ ಕೃಷ್ಣ ರಾವ್ ಮತ್ತು ಋತುಜ; ಋಷಿಕೇಶ್; ರಕ್ಷಾ; ರಕ್ಷಿತಾ; ನಮ್ರತಾ; ಅನ್ವಿತ (ಮೊಮ್ಮಕ್ಕಳು)**

# ವಸಂತ ಎಮ್ ಎಚ್ ಅವರಿಗೆ ಡಾಕ್ಟರೇಟ್ ಪದವಿ

ಗೋವಾದ ಎನ್ ಐ ಟಿ ಯಲ್ಲಿ ಅಸಿಸ್ಟೆಂಟ್ ಪ್ರೊಫೆಸರ್ ಆಗಿರುವ ವಸಂತ ಎಮ್ ಎಚ್ ಇವರು ಮಂಡಿಸಿದ "Low Power Integrated Continuous-time Transconductor-Capacitor filter targeted to operate on 0.5 V Supply Voltage" ಎಂಬ ಸಂಶೋಧನಾ ಪ್ರಬಂಧಕ್ಕೆ ಸುರತ್ಕಲ್‌ನ ಎನ್ ಐ ಟಿ ಕೆ ಯಿಂದ ಡಾಕ್ಟರೇಟ್ ಪದವಿಯಿಂದ ಪುರಸ್ಕೃತರಾಗಿದ್ದಾರೆ. ಅವರು ಕಳೆದ ನವೆಂಬರ್ 15ರಂದು ಸುರತ್ಕಲ್‌ನಲ್ಲಿ ನಡೆದ 12ನೇ ಘಟಿಕೋತ್ಸವದಲ್ಲಿ ಈ ಪುರಸ್ಕಾರವನ್ನು ಸ್ವೀಕರಿಸಿದರು. ಮದ್ರಾಸಿನ ಐ ಐ ಟಿ ಚೆನ್ನೈನಿಂದ ಎಮ್ ಟೆಕ್ ಪದವಿ ಪಡೆದಿರುವ ಶ್ರೀ ವಸಂತ್ ಉಡುಪಿ ತಾಲೂಕು ಕಟಪಾಡಿ ಮೂಡಬೆಟ್ಟು ಶ್ರೀ ಹರಿಶ್ಚಂದ್ರ ರಾವ್ (ನಿವೃತ್ತ ಕೆ ಇ ಬಿ ಅಧಿಕಾರಿ) ಹಾಗೂ ಶ್ರೀಮತಿ ಗಿರಿಜಾ ದಂಪತಿಗಳ ಪುತ್ರ. ಶ್ರೀ ವಸಂತರ ಸಾಧನೆಗೆ ಶ್ರೀ ಶಾರದಾ ಅಭಿನಂದನೆಗಳು.

## ಶ್ರೀಶಾರದಾ ದೇವಸ್ಥಾನ, ಶಾರದಾನಗರ, ಕುಂಜಿಬೆಟ್ಟು , ಉಡುಪಿ

**ಈ ತಿಂಗಳ ಕಾರ್ಯಕ್ರಮಗಳು**

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30 ಗಂಟೆಗೆ

ಪ್ರತಿ ಸೋಮವಾರ: ''**ಸತ್ಸಂಗದವರಿಂದ ಭಜನೆ**'' ಸಂಜೆ 6-00 ಗಂಟೆಯಿಂದ

ಪ್ರತಿ ಮಂಗಳವಾರ: ''**ಸೌಂದರ್ಯಲಹರಿ ಪಾರಾಯಣ**'' ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ)

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ)

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ ''**ಪಾರಾಯಣ**'' ಸಂಜೆ ಗಂಟೆ 4-30ರಿಂದ

**ಸಂಕಷ್ಟಹರ ಚತುರ್ಥಿಯಂದು (ತಾ.08-01-2015) ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.26-12-2014 ಪಂಚಮಿಯಂದು ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ತಾ.22-12-2014 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

## ಉಡುಪಿ ಸಂಘದ ವಾರ್ಷಿಕ ಮಹಾಸಭೆ

ಉಡುಪಿ ಕುಂಜಿಬೆಟ್ಟಿನ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ) ಇದರ 2013-14ನೇ ಸಾಲಿನ ವಾರ್ಷಿಕ ಮಹಾಸಭೆಯು ದಿನಾಂಕ 30-11-2014ರಂದು ಶ್ರೀ ಶಾರದಾ ಮಂಟಪದಲ್ಲಿ ನೆರವೇರಿತು. ಸಂಘದ ಅಧ್ಯಕ್ಷರಾದ ಶ್ರೀ ಯು.ಪ್ರಫುಲ್ಲಚಂದ್ರರಾಯರು ಅಧ್ಯಕ್ಷತೆ ವಹಿಸಿದ್ದರು.

ಶ್ರೀಮತಿ ಜಯಲಕ್ಷ್ಮೀ ಮುರಳೀಧರ ರವರ ಪ್ರಾರ್ಥನೆಯೊಂದಿಗೆ ಪ್ರಾರಂಭ ಗೊಂಡ ಸಭೆಯಲ್ಲಿ ಅಧ್ಯಕ್ಷರು ಆಗಮಿಸಿದ ಎಲ್ಲರನ್ನೂ ಸ್ವಾಗತಿಸಿದರು.

2012-13ನೇ ಸಾಲಿನ ವಾರ್ಷಿಕ ಮಹಾಸಭೆಯ, ವಿಶೇಷ ಮಹಾಸಭೆಯ ವರದಿಗಳನ್ನು ಹಾಗೂ 2013-14ರ ವರ್ಷದ ಕಾರ್ಯಕ್ರಮಗಳ ವರದಿಗಳ ವಿವರಗಳನ್ನು ಸಂಘದ ಕಾರ್ಯದರ್ಶಿ ಶ್ರೀ ಅರವಿಂದ ಕುಮಾರ್ ಸಭೆಯಲ್ಲಿ ವಾಚಿಸಿದರು. ಸುದೀರ್ಘ ಚರ್ಚೆಯ ಬಳಿಕ ಸಭೆಯು ಅಂಗೀಕಾರ ನೀಡಿತು.

2013-14ರ ಆಯವ್ಯಯ ತಃಖ್ತೆಯನ್ನು ಮಂಡಿಸಿದಾಗ ಸಭೆಯು ಅದಕ್ಕೆ ಸರ್ವಾನುಮತದ ಅಂಗೀಕಾರ ನೀಡಿತು. ಅಂದಾಜು ಆಯವ್ಯಯ ಪಟ್ಟಿಗೆ ಅಂಗೀಕಾರ ನೀಡಲು ಸಭೆಯು ನಿರ್ಧರಿಸಿತು. ಮುಂದಿನ ವರ್ಷಕ್ಕೆ ಲೆಕ್ಕಪರಿಶೋಧಕ ರಾಗಿ ಶ್ರೀ ಗಣೇಶ್ ಹೆಬ್ಬಾರ್ ಅಂಬಲಪಾಡಿ ಅವರನ್ನು ಮುಂದುವರಿಸುವುದಕ್ಕೆ ಸಭೆಯು ಒಪ್ಪಿಗೆ ನೀಡಿತು.

ಕೊನೆಯಲ್ಲಿ ಕಾರ್ಯದರ್ಶಿ ಶ್ರೀ ಅರವಿಂದ ಕುಮಾರ್ ಧನ್ಯವಾದವಿತ್ತರು. ಪ್ರಭಾರ ಕೋಶಾಧಿ ಕಾರಿ ಶ್ರೀ ಜಯರಾಮ್‌ರಾವ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

## ಧನುರ್ಮಾಸದ ವಿಶೇಷ ದಿನಗಳು

| | |
|---|---|
| 16-12-2014 | ಧನು ಸಂಕ್ರಮಣ, ಮೂಲಾ ನಕ್ಷತ್ರಾರಂಭ |
| 18-12-2014 | ಸರ್ವೈಕಾದಶೀ |
| 19-12-2014 | ಪ್ರದೋಷಃ |
| 22-12-2014 | ಎಳ್ಳಮವಾಸ್ಯಾ. |
| 29-12-2014 | ಪೂರ್ವಾಷಾಢಾ ನಕ್ಷತ್ರಾರಂಭ |
| 01-01-2015 | ಸರ್ವೈಕಾದಶೀ, ಜೇಷ್ಠಾ ನಕ್ಷತ್ರಾರಂಭ |
| 02-01-2015 | ಪ್ರದೋಷಃ ಮುಕ್ಕೋಟಿ ದ್ವಾದಶೀ |
| 05-01-2015 | ಪೂರ್ಣಿಮಾ. |
| 08-01-2015 | ಸಂಕಷ್ಟ ಚತುರ್ಥಿ ಚಂದ್ರೋದಯ ರಾತ್ರಿ-9.00ಕ್ಕೆ |
| 11-01-2015 | ಉತ್ತರಾಷಾಢಾ ನಕ್ಷತ್ರಾರಂಭ |
| 14-01-2015 | ಮಕರ ಸಂಕ್ರಮಣ. |

## ಮಾಂಗಲ್ಯಂ ತಂತುನಾನೇನ ....

ಮೈರುಕೊಮೆ ಶ್ರೀಮತಿ ಶಾರದಾ ಮತ್ತು ಶ್ರೀ ಭಾಸ್ಕರ್ ರಾವ್ ಎಚ್ ಇವರ ಪುತ್ರ **ಪ್ರವೀಣ** ಹಾಗೂ ನರಸೀಪುರದ ಶ್ರೀಮತಿ ಭಾಗ್ಯಲಕ್ಷ್ಮೀ ಮತ್ತು ಶ್ರೀ ಸೂರ್ಯನಾರಾಯಣ ಹೆಬ್ಬಾರ್ ಇವರ ಪುತ್ರಿ **ಸ್ಮಿತಾ** ಇವರ ವಿವಾಹವು ದಿನಾಂಕ 27-11-2014ರಂದು ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದಲ್ಲಿ ನೆರವೇರಿತು.

★★★ ★★★

ಇನ್ನಾ ಶ್ರೀಮತಿ ಪದ್ಮಿನಿ ಮತ್ತು ಶ್ರೀ ರಮಾನಂದರಾವ್ ಇವರ ಪುತ್ರ **ಲಕ್ಷ್ಮೀಶ** ಹಾಗೂ ಬೆಳ್ಳೆ ಶ್ರೀಮತಿ ಪ್ರಭಾ ಮತ್ತು ಶ್ರೀ ಸುರೇಶ್ ಬಾಬು ರಾವ್ ಇವರ ಪುತ್ರಿ **ಆಶಾ** ಇವರ ವಿವಾಹವು ದಿನಾಂಕ 01-12-2014ರಂದು ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದಲ್ಲಿ ನೆರವೇರಿತು.

★★★ ★★★

ಶ್ರೀಮತಿ ಎಚ್ ಶಾಂತಾ ಮತ್ತು ದಿ। ಗೋವಿಂದಭಟ್ ಇವರ ಪುತ್ರ **ಗುರುಪ್ರಸಾದ್** ಹಾಗೂ ಅದ್ಯಪಾಡಿ ಶ್ರೀಮತಿ ವೈಜಯಂತಿ ಮತ್ತು ಶ್ರೀ ಸುಬ್ರಹ್ಮಣ್ಯರಾಯರ ಪುತ್ರಿ **ಉಷಾ ಕುಮಾರಿ** ಇವರ ವಿವಾಹವು ದಿನಾಂಕ 01-12-2014ರಂದು ಉಡುಪಿ ರಥಬೀದಿಯ ಶ್ರೀ ಕೃಷ್ಣ ಸಭಾ ಭವನದಲ್ಲಿ ನೆರವೇರಿತು.

★★★ ★★★

ಬೆಟ್ಟಂಪಾಡಿ ಶ್ರೀಮತಿ ಇಂದಿರಾ ಮತ್ತು ಶ್ರೀ ಶಿವರಾಮರಾವ್ ಇವರ ಪುತ್ರ **ಚಂದ್ರಕಾಂತ** ಹಾಗೂ ಬೆಳ್ಳೆ ಶ್ರೀಮತಿ ನಳಿನಾಕ್ಷಿ ಮತ್ತು ಶ್ರೀ ಮೋಹನ್ ರಾವ್ ಇವರ ಪುತ್ರಿ **ದಿವ್ಯ** ಇವರ ವಿವಾಹವು ದಿನಾಂಕ 07-12-2014ರಂದು ಉಡುಪಿ ಚಿಟ್ಪಾಡಿ ಶ್ರೀ ಶಾರದಾಂಬ ದೇವಸ್ಥಾನದ ಸಭಾಭವನದಲ್ಲಿ ನೆರವೇರಿತು.

## ಗೃಹಪ್ರವೇಶ

ಉಜ್ಜೋಡಿಯ ಶ್ರೀಮತಿ ಮತ್ತು ಶ್ರೀ ಶೇಷಾದ್ರಿಯವರ ಪುತ್ರ ಶ್ರೀ ರಾಜೇಶ ರಾವ್ ಉಜ್ಜೋಡಿಯವರು ಮಂಗಳೂರು ವಾಮಂಜೂರಿನ ಪರಾರಿ-ತೆಕ್ಕೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಸ್ಥಾನದ ಬಳಿ ನಿರ್ಮಿಸಿದ ನೂತನ ಮನೆ **"ಶ್ರೀಭ್ರಾಮರಿ"**ಯ ಪ್ರವೇಶೋತ್ಸವವನ್ನು ತಾ.29-11-2014ರಂದು ಬಂಧು ಬಾಂಧವರೊಡ ಗೂಡಿ ನೆರವೇರಿಸಿದರು.

## ನಿಧನ

### ಐರಬೈಲು ಸುಬ್ರಹ್ಮಣ್ಯ ಜೋಷಿ

ನಿವೃತ್ತ ಪ್ರಾಂಶುಪಾಲ, ಹತ್ತು ಹಲವು ಸಂಘ ಸಂಸ್ಥೆಗಳ ರೂವಾರಿ, ಶಿಕ್ಷಣ ತಜ್ಞ ಐರಬೈಲು ಸುಬ್ರಹ್ಮಣ್ಯ ಜೋಷಿ (68)ದಿನಾಂಕ 24-11-2014ರಂದು ಹೃದಯಾಘಾತದಿಂದ ಸ್ವಗೃಹದಲ್ಲಿ ನಿಧನರಾದರು. ಶಂಕರನಾರಾಯಣದಲ್ಲಿ ಉಪನ್ಯಾಸಕರಾಗಿ ವೃತ್ತಿ ಜೀವನ ಪ್ರಾರಂಭಿಸಿದ ಮೃತರು ಬೇರೆ ಬೇರೆ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸಿ ಬಿದ್ಕಲ್‌ಕಟ್ಟೆ ಜ್ಯೂನಿಯರ್ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ 2006ರಲ್ಲಿ ನಿವೃತ್ತರಾದರು, ಅನೇಕ ಸಂಘ ಸಂಸ್ಥೆಗಳಲ್ಲಿ ಪದಾಧಿಕಾರಿಗಳಾಗಿದ್ದು, ಸಾಮಾಜಿಕವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದ ಮೃತರು ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.

★★★★★



### ಕಲ್ಯಾಣಿ ಅಮ್ಮ

ದಿ। ಬಾರಕೂರು ಕೂಡ್ಲಿ ಕಾಳಿಂಗರಾಯರ ಧರ್ಮಪತ್ನಿ ಕಲ್ಯಾಣಿ ಅಮ್ಮ (84ವರ್ಷ) ನವರು ದಿನಾಂಕ 02-12-2014ರಂದು ವೃದ್ಧಾಪ್ಯದ ಕಾರಣದಿಂದ ನಿಧನರಾದರು. ಇವರ ಪುತ್ರ ಶ್ರೀನಿವಾಸ ರಾವ್ ಹಲವು ವರ್ಷಗಳ ಹಿಂದೆ ಅಸೌಖ್ಯದಿಂದ ನಿಧನರಾಗಿದ್ದು ಕಲ್ಯಾಣಿ ಅಮ್ಮನವರು ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.

★★★★★

### ಬಾರಕೂರು ಕೂಡ್ಲಿ ಪ್ರೇಮಾ

ದಿ। ಬಾರಕೂರು ಕೂಡ್ಲಿ ರಾಮರಾಯರ ಪುತ್ರಿ ಪ್ರೇಮಾ (62ವರ್ಷ) ರವರು ದಿನಾಂಕ 23-11-2014ರಂದು ಅಪಘಾತದಲ್ಲಿ ನಿಧನರಾದರು. ಅವಿವಾಹಿತೆಯಾಗಿದ್ದ ಮೃತರು ಸಹೋದರ ಸಹೋದರಿ ಸಹಿತ ಬಂಧುಬಾಂಧವರನ್ನು ಅಗಲಿದ್ದಾರೆ.

★★★★★

### ಟಿ ಆರ್ ವೀರೇಶ್ವರ

ಮೂಲತ: ಸುಳ್ಯ ತುದಿಯಡ್ಕದವರಾದ, ಮಡಿಕೇರಿಯಲ್ಲಿ ವಾಸ್ತವ್ಯದಲ್ಲಿದ್ದ ಖ್ಯಾತ ವಕೀಲ ಟಿ ಆರ್ ವೀರೇಶ್ವರ (66ವರ್ಷ) (ದಿ। ತುದಿಯಡ್ಕ ರಾಮಕೃಷ್ಣಯ್ಯ ಹಾಗೂ ದಿ। ಮಹಾಲಕ್ಷ್ಮಿಯವರ ಪುತ್ರ) ಅಲ್ಪಕಾಲದ ಅನಾರೋಗ್ಯದಿಂದ 28-11-2014ರಂದು ಮಂಗಳೂರಿನಲ್ಲಿ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರಿ, ಸಹೋದರರು, ಸಹೋದರಿಯರು ಹಾಗೂ ಅಪಾರ ಬಂಧು ಬಳಗದವರನ್ನು ಅಗಲಿರುತ್ತಾರೆ.

## ವಿಳಾಸ ಬದಲಾವಣೆ

**MR P. BASKAR SHARMA**
B-201, Mantri Woodlands, Banneragatta Road,
Near Arikere Gate, Bangaluru-576056

## ಲೇಖಕರಿಗೆ ಮನವಿ

ಶ್ರೀಶಾರದಾ ಪತ್ರಿಕೆಗೆ ಯಾವುದೇ ಲೇಖನ ಮತ್ತು ಫೋಟೋಗಳನ್ನು ಕಳುಹಿಸುವವರು

**srisharadaudupi@yahoo.co.in**

ಈ ಇ-ಮೇಲ್ ವಿಳಾಸಕ್ಕೆ ತಾವೇ ಮುದ್ರಿಸಿದ ಫೈಲ್‌ಗಳನ್ನು ಕಳುಹಿಸುವ ಮುಖಾಂತರವೂ ನಮಗೆ ತಲುಪಿಸಬಹುದು.
ಇದರಿಂದ ಮುದ್ರಣದಲ್ಲಿ ಸ್ಪಷ್ಟತೆ ಹಾಗೂ ಸಮಯದ ಉಳಿತಾಯವಾಗುವುದು.

-ಸಂಪಾದಕರು, ಶ್ರೀಶಾರದಾ ಪತ್ರಿಕೆ

# ಯುವ ವೇದಿಕೆ, ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಕುಂಜಿಬೆಟ್ಟು, ಉಡುಪಿ

## ಶ್ರೀ ಶಾರದಾ ಟ್ರೋಫಿ ಕ್ರಿಕೆಟ್ ಪಂದ್ಯಾಟ-2015

ತಾ.15-02-2015ನೇ ರವಿವಾರ ಉಡುಪಿಯ ಎಮ್.ಜಿ.ಎಮ್ ಕಾಲೇಜು ಗ್ರೌಂಡ್‌ನಲ್ಲಿ ನಡೆಯಲಿದೆ.
ಆಸಕ್ತ ತಂಡಗಳು 05-02-2015ರೊಳಗೆ ಮೆನೇಜರ್ ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು (Ph : 0820-2520754), ಟಿ.ವಿಶ್ವನಾಥ್ ಶ್ಯಾನುಭೋಗ್ (M : 9741785551), ಪ್ರಕಾಶ್ ರಾವ್ ಕೋಲ್ಪೆ (M : 9481267269), ಎಂ. ಸಂತೋಷ್ ರಾವ್ (M : 9900411040) ಇವರಲ್ಲಿ ತಮ್ಮ ತಂಡದ ಹೆಸರನ್ನು ನೋಂದಾಯಿಸಿಕೊಳ್ಳಬೇಕಾಗಿ ವಿನಂತಿ.

ವಿ.ಸೂ. : 1) ಪಂದ್ಯಾವಳಿಯು ಓವರ್ ಆರ್ಮ್, ಟೆನ್ನಿಸ್‌ಬಾಲ್, ನಿಗದಿತ ಓವರ್‌ಗಳಂತೆ ನಡೆಯುತ್ತದೆ. 2) ಪಂದ್ಯಾವಳಿಯು ನಮ್ಮ ಸಮಾಜ ಬಾಂಧವರಿಗೆ ಮಾತ್ರ ಸೀಮಿತವಾಗಿದೆ. 3) ತಂಡಗಳು ಪಂದ್ಯಾಟದ ದಿನ ಬೆಳಿಗ್ಗೆ 8-30ಕ್ಕೆ ಕ್ರೀಡಾಂಗಣದಲ್ಲಿ ಹಾಜರಿದ್ದು ಸಹಕರಿಸಬೇಕು. 4) ಅಲೆವೂರು ದಿ| ಭುಜಂಗ ರಾವ್ ಮತ್ತು ದಿ| ಶಾಂತಾ ದೇವಿ ಸ್ಮರಣಾರ್ಥ ಅವರ ಪುತ್ರ ಅಲೆವೂರು ಶ್ಯಾಮರಾವ್ ಮತ್ತು ಡಾ| ಬಿ.ಎಚ್.ರಾಘವ ರಾವ್ ಸಹೋದರರು, ಕುಟುಂಬದವರು ನೀಡುವ ನಗದು ಬಹುಮಾನಗಳನ್ನು ವಿಜೇತ ತಂಡಗಳಿಗೆ ವಿತರಿಸಲಾಗುವುದು.

ಇದೇ ದಿನ 10ನೇ ತರಗತಿಯವರೆಗಿನ ಮಕ್ಕಳಿಗೆ **ಜ್ಯೂನಿಯರ್ ಕ್ರಿಕೆಟ್ ಪಂದ್ಯಾಟ**ವೂ ನಡೆಯಲಿದೆ. ಆಸಕ್ತ ತಂಡಗಳು ಬೆಳಿಗ್ಗೆ 9-30ಕ್ಕೆ ಹಾಜರಿರಬೇಕಾಗಿ ಅಪೇಕ್ಷೆ.

**ಕ್ರಿಕೆಟ್ ಪಂದ್ಯಾಟಕ್ಕೆ ಪ್ರಾಯೋಜಕರಾಗಿ, ದಾನಿಗಳಾಗಿ ಹಾಗೂ ಬ್ಯಾನರ್ ಪ್ರದರ್ಶಿಸ ಬಯಸುವವರು ಶಾರದಾ ಮಂಟಪದ ಮ್ಯಾನೇಜರ್‌ರವರನ್ನು ಮುಂಚಿತವಾಗಿ ಸಂಪರ್ಕಿಸಬಹುದು.**

- ಅಧ್ಯಕ್ಷರು ಮತ್ತು ಸಂಚಾಲಕರು, ಯುವ ವೇದಿಕೆ

ತಾ.15-02-2015 ಬೆಳಿಗ್ಗೆ ಗಂಟೆ 9-00ರಿಂದ **ಮಹಿಳೆಯರು ಮತ್ತು ಮಕ್ಕಳಿಗಾಗಿ** ಶ್ರೀಶಾರದಾ ಮಂಟಪದಲ್ಲಿ
**ವಿವಿಧ ಒಳಾಂಗಣ ಕ್ರೀಡಾ ಸ್ಪರ್ಧೆಗಳನ್ನು** ಏರ್ಪಡಿಸಲಾಗಿದೆ.
ವಿವರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

- ಅಧ್ಯಕ್ಷರು ಮತ್ತು ಸಂಚಾಲಕರು, ಮಹಿಳಾ ವೇದಿಕೆ

## ಹೊಸ ವರ್ಷ 2015ಕ್ಕೆ ಶುಭಾಶಯಗಳು



ಉಡುಪಿಯ ನಮ್ಮ ಸಂಘದ ಮುಖವಾಣಿ ''ಶ್ರೀಶಾರದಾ ಪತ್ರಿಕೆ''ಯ ಆರಂಭದ ದಿನಗಳಿಂದಲೂ ಪತ್ರಿಕೆಯ ಬೆಳವಣಿಗೆ ಮತ್ತು ಯಶಸ್ಸಿಗೆ ಅಪಾರ ಕೊಡುಗೆಯನ್ನಿತ್ತ ಎಲ್ಲಾ ಆತ್ಮೀಯ ಸಮಾಜಬಾಂಧವರಿಗೆ, ಶ್ರೀಶಾರದಾ ವೇದಿಕೆಯ ಮಹಾಪೋಷಕರು, ಪೋಷಕರು, ದಾನಿಗಳು ಮತ್ತು ಆಜೀವ ಸದಸ್ಯರಿಗೆ, ಆಡಳಿತ ಮಂಡಳಿ ನಿರ್ದೇಶಕರಿಗೆ, ಎಲ್ಲಾ ವೇದಿಕೆಗಳ ಪದಾಧಿಕಾರಿಗಳು ಮತ್ತು ಸದಸ್ಯರಿಗೆ, ಜಾಹೀರಾತು ನೀಡಿದ ಮಹನೀಯರಿಗೆ, ಹಿರಿಯ, ಕಿರಿಯ ಸಾಹಿತಿಗಳಿಗೆ ಮತ್ತು ಲೇಖಕಮಿತ್ರರಿಗೆ, ಛಾಯಾಚಿತ್ರಗ್ರಾಹಕರಿಗೆ, ಪ್ರತಿ ತಿಂಗಳೂ ಪತ್ರಿಕೆಯನ್ನು ಅಂಚೆಗೆ ರವಾನಿಸುವ ಕಾರ್ಯದಲ್ಲಿ ಪಾಲ್ಗೊಂಡು ಸಹಕರಿಸಿದ ಮತ್ತು ಪ್ರಾಯೋಜಕತ್ವವನ್ನು ನೀಡಿದ ಅಭಿಮಾನಿಗಳಿಗೆ, ಅಲ್ಲದೇ ಪ್ರೀತಿಯ ಓದುಗರಿಗೆ ''2015-ಹೊಸ ವರ್ಷ'' ಸುಖ, ಶಾಂತಿ, ನೆಮ್ಮದಿ ಮತ್ತು ಸಮೃದ್ಧಿಯನ್ನು ತರಲಿ ಎಂದು ಹಾರೈಸುತ್ತೇವೆ.

**-ಸಂಪಾದಕ ಮಂಡಳಿ**


## ಶ್ರೀ ವೈಷ್ಣವಿ ಜ್ಯೋತಿಷ್ಯಾಲಯ

ನಮ್ಮಲ್ಲಿ ಜಾತಕಗಳನ್ನು ಮಾಡಿ ಕೊಡಲಾಗುವುದು.
ಹಾಗೂ ತತ್ಸಂಬಂಧ ಶಾಂತಿ ಹೋಮಾದಿಗಳನ್ನು ಮತ್ತು ಶುಭ ಕಾರ್ಯಕ್ರಮಗಳನ್ನು ನಮ್ಮಲ್ಲಿಯೇ ವ್ಯವಸ್ಥಿತವಾಗಿ ಮಾಡಿಕೊಡಲಾಗುವುದು.

**ವೇದಮೂರ್ತಿ ಚಿದಾನಂದ ಭಟ್**

| | |
|---|---|
| #1437, 5ನೇ ಮುಖ್ಯ ರಸ್ತೆ, 2ನೇ "ಡಿ" ಬ್ಲಾಕ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು-560010 | ಶ್ರೀ ಅಗಸ್ತ್ಯೇಶ್ವರ ದೇವಸ್ಥಾನದ ಬಳಿ, ಕಿರಿಮಂಜೇಶ್ವರ, ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ |

ಮೊಬೈಲ್- 9886629697, 9986119865

## ದೇವಿಕೃಪಾ ಏಜೆನ್ಸೀಸ್, ನಂದಿಕೂರು

ಫೋನ್ : 2556536 (R), 2555466 (O), Mobile : 9845149521

ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.

ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು




## ಶ್ರೀ ಮಾತಾ ಜ್ಯೋತಿಷ್ಯಾಲಯ

ಶ್ರೀ ಸುಬ್ರಹ್ಮಣ್ಯ ಕ್ಷೇತ್ರ, ಚೌಳಿಕೆರೆ, ಬಾರ್ಕೂರು.

ಬಾರ್ಕೂರು ಸಂಸ್ಥಾನದ ಪಾರಂಪರ್ಯ ನಾಗಬ್ರಹ್ಮ ಹಾಗೂ ದುರ್ಗೆಯ ದರ್ಶನ ಪಾತ್ರಿಗಳು, ಜೋತಿಷ್ಯರು ಮತ್ತು ಪುರೋಹಿತರು ಅಷ್ಟ ಮಂಗಲ ಪ್ರಶ್ನೆ, ಆರೂಢರಾಶಿ ಪ್ರಶ್ನೆ, ಜಾತಕ, ನಾಗದರ್ಶನ ಮತ್ತು ಸರ್ಪಸಂಸ್ಕಾರ, ಆಶ್ಲೇಷಬಲಿ, ಪ್ರತಿಷ್ಠೆ, ಶಾಂತಿ ಹಾಗೂ ಶುಭ ಕರ್ಮಗಳಿಗೆ ಅಗತ್ಯವಿದ್ದಲ್ಲಿ ವಿಚಾರಿಸಿ.

**ಶ್ರೀ ರಾಘವೇಂದ್ರ ಭಟ್ (ಪೋನ್ : 9632302234.)**

ಪ್ರೊ : ಸುಧಾಕರ್ ರಾವ್ ಬೆಳ್ಳೆ

## ಶ್ರೀಮಾತಾ ಇಲೆಕ್ಟ್ರಾನಿಕ್ಸ್

ಎಲ್ಲಾ ರೀತಿಯ ಗೃಹೋಪಯೋಗಿ ವಸ್ತುಗಳಿಗಾಗಿ ಭೇಟಿ ನೀಡಿ....

ಪ್ರೀತಿ ಕಾಂಪ್ಲೆಕ್ಸ್, ಬೆಳ್ಮಣ್ಣು, ಉಡುಪಿ. ಫೋನ್ : 08258-274103
ಚೈತ್ರ ಕಾಂಪ್ಲೆಕ್ಸ್, ಪಡುಬಿದ್ರಿ ಗ್ರಾಮಪಂಚಾಯತ್‌ನ ಎದುರು. ಫೋನ್ : 0820-2599093



## RAJESH POWER PRESS

PRINTERS & PUBLISHERS

DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com

**QUALITY FIRST AND ALWAYS**



ತಂತ್ರಾಡಿ ವಿಶ್ವನಾಥ ಶಾನುಭೋಗ್

94487 24161
97417 85551

## ಹರಿಕೃಷ್ಣ ಡಿಜಿಟಲ್ಸ್

ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ

''ಶ್ರೀರಂಗ'', ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ - 576 102

ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

*Krishna Rao*

Ph : 2520652
Mob. : 9902029048

## KISHAN

Studio & Video

Indoor Photography & Port Folio Photography,
Video & Mixing, Lamination

MAIN ROAD, MAJOOR & BANTAKAL.


Owned & Published by : Sri Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Edited by Krishnakumar Rao Mattu, Designed @ SriNidhi Computer Graphics, Rajataadri, Manipal, Printed at Agrahara Offsets, Udupi. E-mail : srisharadaudupi@yahoo.co.in Website : www.srisharada.org